ದೊಡ್ಡಸ್ಥಿತಿ ಆನಾದಿತರು ಹೇಳಿಕೆಯು ಸರ್ಕಾರ, ಕಂದಾಯ ವಸೂಲಿಯನ್ನು ಪರಾನಕೆ ಸುಲಿಗೆಗಳಿಗೆ ಹೋಲಿಸುವುದೂ, ಸೂಬಾದ ಮೊಬಲಗನ್ನು ಅಧಿಕಾರಿಗಳು ತಮ್ಮವ್ಯಕ್ತಿ ಹುಚಿಕೊಳ್ಳುವ ಲೂಟಿ ಎಂದು ಹೇಳಿರುವುದೂ, ಅಥವಾ ಮೊಬಲಗೇ ಆನಾದಿತರ ಹೇಳಿಕೆಯಂತೆ ಸರ್ಕಾರಿ ಅಧಿಕಾರಿಗಳು ಬಡಜನರು ಶ್ರೀಮನ್ಮಹಾರಾಜರುಗಳಿಗೆ ಹೋಗಬೇಕಾದ ಪೂಲಿಸಾಸ್ತಿಯ ರಾಷ್ಟ್ರ ಯೋಗಿಸುತ್ತಿದ್ದಾರೆಂದೂ, ಹೇಳುವುದೂ, ಸುಳ್ಳು ಮಾನಹಾನಿಕರವಾಗಿದ್ದೂ ಪ್ರಮೆ, ಇನೆಲ್ಲಾ ಸರ್ಕಾರದ್ರೋಹ ದ್ವೇಷ ಕ್ಕೂ, ವಿರುದ್ಧಾರೋಪಕ್ಕೂ ಗುರಿಯಾಗಿ ಜನಗಳಲ್ಲಿ ಇದರ ವಿಷಯದಲ್ಲಿ ಎದುರಾಭಾವನೆಯನ್ನು ಹರಡುವ ಪ್ರಯತ್ನಗಳಿಂದೇ ಹೇಳಿಕೊಳ್ಳತ್ತದೆ ಸರ್ಕಾರದ ಯಾವ ಶೀತಿ ಮನ್ನೇ ಆಗಲಿ, ಬಾಹ್ಯ ಕಾರ್ಯಗಳನ್ನೇ ಆಗಲಿ ಟೀಕಿಸಬಹುದು, ವಿಮರ್ಶಿಸಬಹುದು. ಆದರೆ ಸರ್ಕಾರಕ್ಕೆ ದುರುದ್ದೇಶಗಳನ್ನು ಆರೋಪಣೆ ಮಾಡುವುದು ನ್ಯಾಯವಲ್ಲ. ಕಲಿಸಿನ ಶಿಕ್ಷಣಗೆ ಗುರಿಯಾಗುತ್ತದೆ. ಮೊದಲನೇ ಆನಾದಿತರು ಸರ್ಕಾರಕ್ಕೆ ಮಂಗಳಾರತಿ ಮಾಡಿ, ಮುಖಕ್ಕೆ ಮಸಿ ಬಳಿಯಬೇಕೆಂದು ಹೇಳುವುದು, ಸರ್ಕಾರವು ಜಲ್ಲಿ ಕಾನೆಂತಿದ್ದು ಊರಿದರೆ ಪಾಠವೋಗುವುದೆಂದು ಹೇಳುವುದು. ಎರಡನೇ ಆನಾದಿತರು ರಾಷ್ಟ್ರದಿಂದ ಕಮ್ಯೂನಿಸ್ಟುಗಳನ್ನೂ ಬಂಗಾಳದಿಂದ ಟೆರರಿಸ್ಟುಗಳನ್ನೂ ಮೈಸೂರಿನಲ್ಲಿ ಕೆಲವರನ್ನು ಸೇರಿಸಿರುವುದಾಗಿ ಹೇಳುವುದು. ಮೂರನೇ ಆನಾದಿತರು ತಗಿನ ಸರ್ಕಾರವನ್ನು ಸೋಲಿಸಿ ಬೇರೆ ಸರ್ಕಾರವನ್ನು ಸ್ಥಾಪಿಸುವುದಾಗಿ ಹೇಳುವುದು ಪಂಡಿತ ಜವಾಹರಲಾಲ್ ನೆಹರೂರವರ ಪಕ್ಷಕ್ಕೆ ಎಂಬುದಾಗಿ ಒಂದು ಪಾರನ್ನು ಹೇಳಿತ್ತ, ದೇಶೀಯ ರಾಜರುಗಳನ್ನು ನಾರಗೊಳಿಸುವುದಾಗಿ ಹೇಳುವುದು, ಇವನ್ನೆಲ್ಲಾ ರಾಜದ್ರೋಹವೆಂಬುದಾಗಿ ಸರಿಗಣಿಸಿ ಗಕ್ಕಂ

ತರೆಲ್ಲಿ ಡೂರೇ ಆಗಲೀ ಈ ರೀತಿ ಯೆಗಳನ್ನು ಹೇಳಿದರೆ, ಆವು ಅಕ್ಷೇಪಾರ್ಹವಾದುದು. ಈ ಮೂರು ಜನರೂ ಜಾಮೀನಿನ ಮೊಕ್ಕದ್ದಮೆ ಎದುರಿಸಿ ಮುಕ್ತ ಸಂಸ್ಥೆಯ ಅಧಿಕಾರ ಪಡೆದವರೆ ಹೇಳುತ್ತಿದ್ದಾರೆ! ಆದುದರಿಂದ ಆ ತಪ್ಪು ಇನ್ನೂ ಹೆತ್ತಾದುದು ಮೊದಲು ಆನಾದಿತರು ಮೈಸೂರು ಸಂಸ್ಥಾನದ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರು, ಉಳಿದವರೂ ಆವರ ಜೊತೆಯಲ್ಲಿ "ಕ್ವಿಟ್ ಇಂಡಿಯಾ ಆಫ್ ಆಕ್ಷನ್" ಸದಸ್ಯರಾಗಿ ಸೆರೆಮನೆಯಿತ್ತಿದ್ದವರು.

ಆನಾದಿತರು ಹೊರಡಿಸಿರುವ ಹೇಳಿಕೆಯು ಸರ್ಕಾರ, ಕಂದಾಯ ವಸೂಲಿಯನ್ನು ಪರಾನಕೆ ಸುಲಿಗೆಗಳಿಗೆ ಹೋಲಿಸುವುದೂ, ಸೂಬಾದ ಮೊಬಲಗನ್ನು ಅಧಿಕಾರಿಗಳು ತಮ್ಮವ್ಯಕ್ತಿ ಹುಚಿಕೊಳ್ಳುವ ಲೂಟಿ ಎಂದು ಹೇಳಿರುವುದೂ, ಅಥವಾ ಮೊಬಲಗೇ ಆನಾದಿತರ ಹೇಳಿಕೆಯಂತೆ ಸರ್ಕಾರಿ ಅಧಿಕಾರಿಗಳು ಬಡಜನರು ಶ್ರೀಮನ್ಮಹಾರಾಜರುಗಳಿಗೆ ಹೋಗಬೇಕಾದ ಪೂಲಿಸಾಸ್ತಿಯ ರಾಷ್ಟ್ರ ಯೋಗಿಸುತ್ತಿದ್ದಾರೆಂದೂ, ಹೇಳುವುದೂ, ಸುಳ್ಳು ಮಾನಹಾನಿಕರವಾಗಿದ್ದೂ ಪ್ರಮೆ, ಇನೆಲ್ಲಾ ಸರ್ಕಾರದ್ರೋಹ ದ್ವೇಷ ಕ್ಕೂ, ವಿರುದ್ಧಾರೋಪಕ್ಕೂ ಗುರಿಯಾಗಿ ಜನಗಳಲ್ಲಿ ಇದರ ವಿಷಯದಲ್ಲಿ ಎದುರಾಭಾವನೆಯನ್ನು ಹರಡುವ ಪ್ರಯತ್ನಗಳಿಂದೇ ಹೇಳಿಕೊಳ್ಳತ್ತದೆ ಸರ್ಕಾರದ ಯಾವ ಶೀತಿ ಮನ್ನೇ ಆಗಲಿ, ಬಾಹ್ಯ ಕಾರ್ಯಗಳನ್ನೇ ಆಗಲಿ ಟೀಕಿಸಬಹುದು, ವಿಮರ್ಶಿಸಬಹುದು. ಆದರೆ ಸರ್ಕಾರಕ್ಕೆ ದುರುದ್ದೇಶಗಳನ್ನು ಆರೋಪಣೆ ಮಾಡುವುದು ನ್ಯಾಯವಲ್ಲ. ಕಲಿಸಿನ ಶಿಕ್ಷಣಗೆ ಗುರಿಯಾಗುತ್ತದೆ. ಮೊದಲನೇ ಆನಾದಿತರು ಸರ್ಕಾರಕ್ಕೆ ಮಂಗಳಾರತಿ ಮಾಡಿ, ಮುಖಕ್ಕೆ ಮಸಿ ಬಳಿಯಬೇಕೆಂದು ಹೇಳುವುದು, ಸರ್ಕಾರವು ಜಲ್ಲಿ ಕಾನೆಂತಿದ್ದು ಊರಿದರೆ ಪಾಠವೋಗುವುದೆಂದು ಹೇಳುವುದು. ಎರಡನೇ ಆನಾದಿತರು ರಾಷ್ಟ್ರದಿಂದ ಕಮ್ಯೂನಿಸ್ಟುಗಳನ್ನೂ ಬಂಗಾಳದಿಂದ ಟೆರರಿಸ್ಟುಗಳನ್ನೂ ಮೈಸೂರಿನಲ್ಲಿ ಕೆಲವರನ್ನು ಸೇರಿಸಿರುವುದಾಗಿ ಹೇಳುವುದು. ಮೂರನೇ ಆನಾದಿತರು ತಗಿನ ಸರ್ಕಾರವನ್ನು ಸೋಲಿಸಿ ಬೇರೆ ಸರ್ಕಾರವನ್ನು ಸ್ಥಾಪಿಸುವುದಾಗಿ ಹೇಳುವುದು ಪಂಡಿತ ಜವಾಹರಲಾಲ್ ನೆಹರೂರವರ ಪಕ್ಷಕ್ಕೆ ಎಂಬುದಾಗಿ ಒಂದು ಪಾರನ್ನು ಹೇಳಿತ್ತ, ದೇಶೀಯ ರಾಜರುಗಳನ್ನು ನಾರಗೊಳಿಸುವುದಾಗಿ ಹೇಳುವುದು, ಇವನ್ನೆಲ್ಲಾ ರಾಜದ್ರೋಹವೆಂಬುದಾಗಿ ಸರಿಗಣಿಸಿ ಗಕ್ಕಂ

ಭಷಗ್ರಸ್ತ ಆಯುರ್ವೇದ ವಿದ್ವಾ ಬಿ. ವಿ. ಹಂಡಿತರ

— ಬಾಲಸುಧಾ —

ಮಕ್ಕಳ ಜ್ವರನ ಗೆಡ್ಡೆಜೆನ್ನು ಹುತಿ ಗುಣ ಪಡಿಸುತ್ತೆ. ಲಿವರ್ (ಕೋಶ) ನೆಪ್ಪಾಗಿ ಕಣ್ಣು ಹೆಳದಿ ಬಣ್ಣವಾಗಿದ್ದರೆ ಇವರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ. ಬಿಲಿ ಪದಗಳಂದಲೂ ಉಪಯುಕ್ತ ಸಿದ್ಧವಾಗಿದೆ—ಪ್ರತಿದಿನಿ ನಮ್ಮ ಬಾಲಸಂಜೀವಿನಿಯನ್ನೇ ಉಪಯೋಗಿಸಿರಿ.

ಬಾಲಸುಧಾ ಬೆಲೆ 1 ರೂ. ಬಾಲಸಂಜೀವಿನಿ

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ

ಸದ್ವೈದ್ಯಶಾಲಾ, ನಂಜನಗೂಡು.

ಸೂಚನೆ:—ಈ ಸ್ಪರ್ಧೆಯ ಸರಿಯಾದ ಉತ್ತರವು ಸಾಧ್ವಿ ಎಡಿಟರ ಬಳಿ ಮೊಹರುಮಾಡಿ ಇಟ್ಟಿರುತ್ತೆ. ಅದಕ್ಕೆ ಸ್ಪರ್ಧೆ ಬಿಟ್ಟಿರುವ ಸಮಯೋಚಿತವಾದ ಸ್ಪರ್ಧೆಗೆ ಮೊದಲ ಬಹುಮಾನವೂ, ಒಂದು ಮತ್ತು ಎರಡು ಕಪ್ಪಿರುವವುಗಳಿಗೆ ಇತರ ಬಹುಮಾನಗಳೂ ಕೊಡಲ್ಪಡುವುವು. ಒಬ್ಬರಿಗಿಂತ ಹೆಚ್ಚಾಗಿ ಬಹುಮಾನಗಳು ಎಲ್ಲರಿಗೂ ಹಂಚಲ್ಪಡುವುವು. ಬಹುಮಾನಗಳನ್ನು ಹಂಚುವ ವಿಷಯದ ಸ್ಪರ್ಧೆಯ ಮ್ಯಾನೇಜರರಿಗೆ ಸೇರಿದ್ದು. ಈ ವಿಷಯದಲ್ಲಿ ಯಾವ ರೀತಿಯ ಪತ್ರವ್ಯವಹಾರಗಳಿಗೂ ಅವಕಾಶವಿಲ್ಲ. ಪ್ರತಿ ಸ್ಪರ್ಧೆಗೂ ಪ್ರವೇಶಪತ್ರ ನಾಲ್ಕಾಣೆ. ಎಷ್ಟಕ್ಕಿಂತ ಕಡಿಮೆ ಸ್ಪರ್ಧೆಗಳನ್ನು ಹಾಗೀಕರಿಸುವುದಿಲ್ಲ. ನಾಲ್ಕು ಉತ್ತರಗಳನ್ನೂ ಕಳುಹಿಸುವುದು ಇಷ್ಟವಿಲ್ಲದಿದ್ದರೆ ಒಂದು ಉತ್ತರವನ್ನು ಮುಖಪತ್ರಾಗಿ ಕಳುಹಿಸಬಹುದು. ಪ್ರವೇಶ ಧನವನ್ನು ಪೋಸ್ಟಲ್ ಸ್ಟ್ಯಾಂಪ್ಸು, ಅಥವಾ ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಪಿಜಾರ್ ಮೂಲಕ ರವಾನಿಸಬಹುದು. ಉತ್ತರಗಳನ್ನು ಬರೆಯತಕ್ಕವರು ನವೆಂಬರ್ 15 ಮತ್ತು 22 ನೇ ಸಾಧ್ವಿ ಕೂಪನ್ನುಗಳಲ್ಲಾಗಲಿ ಅಥವಾ ಹಾಯಿನಾಮು ಪೇಪರುಗಳಿರತಕ್ಕ ಪ್ಯಾಕೆಟ್ಟುಗಳಲ್ಲಾಗಲಿ ಚಿತ್ತಿಲ್ಲದಂತೆ ಚೆನ್ನಾಗಿ (ಕಾದುನಲ್ಲಿ) ಬರೆದು ಕಳುಹಿಸಬೇಕು. ಉತ್ತರಗಳನ್ನು ಕಳುಹಿಸಲು 1937 ನೇ ಇಸವಿ ಡಿಸೆಂಬರ್ ೧೫ ನೇ ತಾರೀಖು ಕೊನೆಯದಿನ. ನಂತರ ಕಳುಹಿಸುವ ಉತ್ತರಗಳನ್ನು ಸ್ವೀಕರಿಸುವುದಿಲ್ಲ. ಸರಿಯಾದ ಉತ್ತರವನ್ನು ಡಿಸೆಂಬರ್ ೬ ನೇ ತಾರೀಖಿನ ಸಾಧ್ವಿ ಯಲ್ಲಿ ಪ್ರಕಟಿಸಲಾಗುತ್ತೆ.

ಚಿತ್ರಶಾಲಾ ಸ್ಪರ್ಧೆ ನಂ. ೪೭



ಪೋಸ್ಟು ಮೂಲಕ ಕಳುಹಿಸಿರಿ
ಪವರು ೫ ನೇ ತಾರೀಖು
ಕೊಡಾ ಕಳುಹಿಸಬಹುದು

ಎಲ್ಲರಿಗಿಂತಲೂ ಹೆಚ್ಚಿಗೆ
ಉತ್ತರಗಳನ್ನು
ಕಳುಹಿಸಿದವರಿಗೆ
ಸ್ಪೆಷಲ್ ಬಹುಮಾನ
೭೦
ರೂಪಾಯಿ

ಚಿತ್ರಶಾಲಾ ಸ್ಪರ್ಧೆ ನಂ. ೪೭



ಹೆಸರು .....
ವಿಳಾಸ .....
ಕೂಪನ್ ನಂ ..... ಪೋಸ್ಟಲ್ ಆರ್ಡರ್ ನಂಬರು.....

ಹೆಸರು .....
ವಿಳಾಸ .....
ಕೂಪನ್ ನಂ. ..... ಪೋಸ್ಟಲ್ ಆರ್ಡರ್ ನಂಬರು.....

ಎಡದಿಂದ ಬಲಕ್ಕೆ

೧ ಹೆಚ್ಚು ಮಾತನಾಡದಿರುವವನು ೪. ಬಾಗದು ೫ ಹಿಮ್ಮೆರ ೧೧ ಒಡಂಕೆ ಕಣ್ಣುಳ್ಳವನು ೧೫. ಈತನು ಬುದ್ಧಿವಂತನೂ, ಶಕ್ತಿವಂತನೂ ಆಗಿ ಇತರರಿಗಿಂತಲೂ ಹೆಚ್ಚಿಗೆ ಸಂಪಾದಿಸಬಹುದು ೧೭. ನಂಕ ೨೦ ಕೆಲವರ ವಿಕೆಯಿಂದ ಅವರು ಹುಟ್ಟವ.....ವನ್ನು ತಿಳಿಯಬಹುದು ೨೨. ಒಬ್ಬ ಸ್ತ್ರೀ ಪಿತಾ ೨೫. ಸ್ತ್ರೀದಿಲೆ ೨೯ ಇದಕ್ಕೆ ಸಿಲುಕಿದವರು ಕೆಲ್ಸಗಳನ್ನು ಬಿಡಲೇಬೇಕು ೩೦. ಬಿಡಲ್ಪಟ್ಟ ತ್ಯಜಿಸಿದ ೩೩ ವಿತ್ತಿನ್ನರೆ ೩೬. ಆಪಜಯ ೩೭. ೪೦. ಸಹಾಯವಾಗು ೪೩. . . . ಗಾಗಿ ಪರಸ್ಪರದಿಂದ ಬರತಕ್ಕವರು ೫೨ ಎಚ್ಚರಿಕೆಯಿಂದ ಇರಬೇಕು ೫೪. ಕೃಷ್ಣ.

ಮೇಲಿನಿಂದ ಕೆಳಕ್ಕೆ

೧ ಮೊದಿಕ್ಕೊಂಡಿರುವ, ಕೂಡಿರುವ ೨. . . . ಮಾಡದಿರುವ ಮನೆಯವರ ೩. ಸ್ತ್ರೀಯವಾದ, ಸುಂದರವಾದ ೫. ಜೈಲ ಕವಿ ೬ ಸ್ತ್ರೀತಿ ೭. ಇದು ಒಳ್ಳೆಯದಾಗಿದ್ದರೆ ಬಾರೂ ಮತ್ತಾ ಹೋಗೆನ್ನುವುದು ೮. ಕವಿ ೯. ಕೊನೆಯ ಸಂವತ್ಸರ ೧೦. ಸುಂದ್ರ, ಸುಂದ ೧೨. ಬಣ್ಣವಲ್ಲದ್ದ, ತಣ್ಣಗಿರುವುದು ೧೩ ನೋಡಲು ಚೆನ್ನಾಗಿರುವ ಇದು. ಅನೇಕರನ್ನು ತಪ್ಪು ಮಾಡಿಸಿ ಆಕರ್ಷಿಸುವುದು ೧೪. ಇವು ಸೀತಿಯೋಗದವುಗಳಿವೆ ೧೮. ದೇವತೆಲ್ಲಿ ೧೯ ಭೂಮಿ ೧೭ ೬೦ ದು ಸಂವತ್ಸರ ೨೧ ದಕ್ಷಿಣ ಹಿಂದೂಸ್ತಾನದ ಕವಿಗಳಲ್ಲೊಂದು ೨೩. ಶರವ್ಯ ತಪಸ್ಸಿ ... ವೆಂದೂ ಕರೆಯುತ್ತಾರೆ ೨೪ ಇದು ಹೆಚ್ಚಿದವಾಗಿದ್ದಾಗ್ಲಿ, ಜನರ ಬುದ್ಧಿಯು ಬದಲಾಯಿಸುತ್ತಾ ಹೋಗುವುದು ೨೫. . . . ಕ್ಕೋಗಾದ ಮನುಷ್ಯನು ಸಮಸ್ಯೆಯಿಂದಿರುವುದು ೨೮. ಹಣೆ ೨೮. ಕಲಸು. ಕಾವಾತು ೩೮. ಇದು ದೊಡ್ಡದಾಗಿದ್ದಷ್ಟೂ ಸಂಜ್ಞೆಗೆ ಅನುಕೂಲ ೩೧ ಗುಡಿ: ನಾಹನ ೩೭. ಸನ್ಯಾಸಿ ೩೮ ಸಮುದ್ರದಲ್ಲಿ ಹೊಕ್ಕಾಗ ಬೆಲೆಯುಳ್ಳ ವಸ್ತು ೩೯ ಚೀತಿ ೪೫. . . . ಕಲ್ಲದೆ ಬೆಳೆದ ಮಕ್ಕಳೂ ಸಹ ವೃಥಕಾಯವಾಗಿರುವುದನ್ನು ನೋಡಬಹುದು ೪೭. ದೇವಪ್ಪಯಿರಂತಿರುವವರು ೫೨. ಯಾರು ೫೩. ಇರು ೫೫. ಮನೆ (ಅಕ್ಷರಗಳ ಸ್ಥಳಬದಲಿ)

ನಿಯಮಗಳು:— ಮ್ಯಾನೇಜರ್, ಚಿತ್ರಶಾಲಾ ಸ್ಪರ್ಧೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

೧ ಸೂ.—ಪ್ರೈಜುಗಳಿಲ್ಲದ ಸ್ಪರ್ಧೆಗೆ ಜಾಗವಹಿಸುವವರು ತಮ್ಮ ಉತ್ತರಗಳನ್ನು ಮೇಲಿನ ಸ್ಟ್ರೀಟ್ ಮಾರ್ಕೆಟ್—ಇವರಿಗೂ, ಬೆಂಗಳೂರಿನಲ್ಲಿ ಭಾಗ ವಹಿಸುವವರು ಮಿ ಕೆ ಮೂರ್ತಿ, ಟೈಲರಿಂಗ್ ಮಾಸ್ಟರ್, ತಿಂಗಿಸಕಾಯಿ ವ್ಯಾಪಾರಿಗಳು, ನಂ|| 16 ನ್ಯೂ ಮಾರ್ಕೆಟ್, ಸೇತೂವಿನ ಬೀದಿ, ಇವರಿಗೂ ಪಾವತಿಮಾಡಬೇಕಾಗಿ ವಿನಂತಿ ನ್ಯೂ. ಚಿ.

Asiatic Government Security Life Assurance Co., Ltd.

HEAD OFFICE:-ASIATIC BUILDINGS, BANGALORE CITY.

THIS IS PURELY A NATIONAL CONCERN

Managed by Experts
Low Premiums and Liberal Policy Conditions

Apply for Agency—
To
Mr H Venkatramaiah Dist Supdt.,
ASIATIC BUILDINGS,
Bangalore City Or
To
V RANGASAMI Esq
B A BL, F C I.
General Manager



ಚೆನ್ನಾಗಿ ಅನುಭವವುಳ್ಳವರ ಅಡಳಿತಕ್ಕೆ ಒಳಪಟ್ಟು, ಕಡಿಮೆ ಪ್ರೀಮಿಯಮ್ಮು ಮತ್ತು ಧಾರಾಳವಾದ ಪಾಲಿಸಿ ಪರತ್ತುಗಳನ್ನು ಕೊಡುವ ಶುದ್ಧ ಸ್ವದೇಶೀ ಜೀವಿಮಾ ಸಂಸ್ಥೆ.

ವಿಜಯನಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ —
ಹೆಚ್. ವೆಂಕಟರಾಮಯ್ಯ,
ಡಿವಿಜನಲ್ ಸೂಪರಿಂಟೆಂಡೆಂಟ್,
ಏಷ್ಯಾಟಿಕ್ ಬಿಲ್ಡಿಂಗ್ಸ್,
ಬೆಂಗಳೂರು ಸಿಟಿ.
ಅಥವಾ
ಮಾನ್ಯ ವಿ ರಂಗಸ್ವಾಮಿ, ಬಿ ಎ, ಬಿ ಎಲ್, ಎಫ್.ಸಿ ಐ.
ಜನರಲ್ ಮ್ಯಾನೇಜರ್.

ಏಷ್ಯಾಟಿಕ್ ಲೈಫ್ ಇನ್‌ಷೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ ಆಫೀಸ್:—ಏಷ್ಯಾಟಿಕ್ ಬಿಲ್ಡಿಂಗ್ಸ್, ಬೆಂಗಳೂರು.

ದೃಷ್ಟಿಮೃತ

"ಈ ಪ್ರಾಕೃತಿಮೃತವು ಸಹ್ಯಾದ್ರಿ ಪರ್ವತವಲ್ಲಿ ಅನೇಕ ವನಸ್ಪತಿಗಳ ರಸವರ್ಗಗಳಿಂದ ಪ್ರಾಕೃತರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಕಾಸ್ಮೋಕ್ಲೆ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ವಿಧರಹಿತ ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ತಳಿಗೆ ಕಡತೆ (ಗರಮಿ) ಸಂಪೂರ್ಣ ನಾಶವಾಗುತ್ತವೆ ಮತ್ತು ಧಾತುಸ್ರಾವ ಸ್ವಪ್ನಾವಸ್ಥೆಯಿಂದ ಬರುವ ಬೇರೆ ಯಾವದೇ ಕಾರಣದಿಂದ ಬಂದ ಅತಿಕೃತತೆಯಿಂದ ಕೈಕಾಲು, ಕಣ್ಣುಗಳ ಉರಿಪು ಮೈಕೋಣ, ಶೌಚಕ್ಕೆ ಕಷ ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಣ್ಣಾಗ್ನಿ ಬಲಿಯುತ್ತವೆ ಮತ್ತು ಅನ್ನ ಚೆನ್ನಾಗಿ ಸಜ್ಜನವಾಗಿ ಶೌಚಕ್ಕೆ ಸಾಫವಾಗುತ್ತವೆ ಇದರ ಸೇವನೆಯಿಂದ ತರುಣರಿಗೆ ಸ್ವಭಾವದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇವರಿಂದ ಅದು ಹೋಗಿ ಪುನಃ ಯೌವನವಂತರಾಗಿ, ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ ಮುಖ್ಯವಾಗಿ ಸ್ತ್ರೀಯರಿಗೆ ಸುತ್ತ ಬಹಳ ಗರ್ಮಿ ಸಂಬಂಧವಾದ ರೋಗಗಳಿದ್ದರೂ ತಪ್ಪಿಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು ಈ ಔಷಧದ ಸೂರು ಔಟ್ಟಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣವಾಗುತ್ತವೆ ಇದರ ಅನುಭವ 1 ಔಟ್ಟಿ ಸೇವನೆ ಮಾಡಿದ ನಂತರ ನಿಮಗೆ ತಿಳಿದೀತು

1 ಬಾಟ್ಲಿ ಬೆಲೆ ರೂ ೧ ಳ ೦, 3 ಬಾಟ್ಲಿ ೩-೪-೦, 1 ಡಜನ್ ಬಾಟ್ಲಿ ಬೆ ೮೧೨-೦-೦

ಮ್ಯಾನೇಜರ್—ದ್ರಾಕ್ಷಾಮೃತ ಡಿಪೋ ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ.

ವೈಷ್ಣವರು ಸ್ವಾತಿಸ್ಪೃ —ಟಿ ಸಿ ಗಟ್ಟಿರಾಜ್, ಜೊಂಬಾಯಿ ಅಸೆಂಬ ಭವನ, ಮಾರ್ಕೆಟ್ ಥಾರ್ಮಸಿ, ಸಯ್ಯಾಜಿರಾವ್ ರೋಡ್. ಬೆಂಗಳೂರು ಸಿಟಿ —ಸಿ ವಿ ಸ್ಟೋರ್ಸ್ ಅಂಡ್ ಸನ್ಸ್, ಚಿಕ್ಕನೇಲೆ ತುಂಕೂರು—ಟಿ ಆರ್. ಗುರು ತನ್ನಪ್ಪಸ್ವಪ್ಪ ಅಂಡ್ ಬ್ರದರ್ಸ್ ಚಿಕ್ಕಮಗಳೂರು—ಎಂ ಎಸ್ ಮಂಜಯ್ಯಕಟ್ಟೆ. ಶಿವಮೊಗ್ಗ—ಶ್ರೀಕೃಷ್ಣ ಬ್ರಡಿಂಗ್ ವರ್ಕಸ್ ಮತ್ತು ಪಿಂಡೇರಾವ್ ಬ್ರದರ್ಸ್. ದಾವಣಗೆರೆ—ಪಟ್ಟೇರಪ್ಪ ಮತ್ತು ಕೆ ಭೋಗಯ್ಯಕಟ್ಟೆ ಅಂಡ್ ಬ್ರದರ್ಸ್

ಭಿಷಗ್ರತ್ನ ಪಾಳ್ಕೆದ ವೆಂಕಟಾಚಲ ಪಂಡಿತ ಅಂಡ್ ಸನ್,

ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳು

ಈ ಮಾತ್ರೆಗಳು 1-2 ನ್ನು ಪ್ರತಿ ದಿನ ಊಟವಾದ ಬಳಿಕ ತಾಂಬೂಲದೊಡನಾಗಲಿ ಹಾಗೆಯಾಗಲಿ, ಉಪಯೋಗಿಸುತ್ತಿದ್ದರೆ, ಬಾಯಿ ಸುವಾಸನೆಯಾಗಿರುತ್ತಾ ಎಂತಹ ಗತ್ತುಸಾದ ಆಹಾರವನ್ನಾದರೂ ಜೀರ್ಣಿಸಿ ಕೊಳಕಾದ ಸೀರು ಕೆಟ್ಟಗಾಳಿಗಳ ಮೋವನ್ನೂ, ಅಂಟುಜಾಡ್ಯ ಗಳನ್ನೂ ಬಳಿಗೆ ಸೇರಿಸದೆ ಮಲಬದ್ಧವನ್ನು ಹೋಗಲಾಡಿಸಿ, ಆರೋಗ್ಯವಾಗಿರುವಂತೆ ಮಾಡುತ್ತದೆ.

ಮಕ್ಕಳ ಪಕ್ಕೆಸೆಳೆತ (ಎಳವು, ಕಾಲುಕೈ ವದರಿ ಬಾಯಿಬ್ಬಿ ಜೊಲ್ಲು ಸುರಿಸುವ ಸೀತವಾತ) ಮಕ್ಕಳ ಮತ್ತು ಹೊಡ್ಡವರ ಸೀತ, ನೆಗಡಿ, ಕೆಮ್ಮಲು, ಗೂರಲು, ಜ್ವರ, ಚಳಿಜ್ವರ, ಅಜೀರ್ಣ, ಅತಿಸಾರಾದ ಭೇದಿ, ಹೊಟ್ಟೆಮುಬ್ಬರ, ಹೊಟ್ಟೆ ನೋವು. ಅಗ್ನಿಮಾಂದ್ಯ, ಇನ್‌ಫ್ಲೂಯೆಂಜಾ, ಪ್ಲೇಗು, ಶೀತಭೇದಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಸ್ತ್ರೀಯರು ಹೆತ್ತ ದಿನ ಸ್ನಾನದ ದಿನ ಶೀತವಾತ ಪರಿಹಾರಕ್ಕಾಗಿ ಕಸ್ತೂರಿಗೆ ಬದಲು ಈ ಮಾತ್ರೆಗಳನ್ನೇ ಲಕ್ಷೋಪಲಕ್ಷ ಜನರು ಉಪಯೋಗಿಸುತ್ತಿರುತ್ತಾರೆ ಈ ಮಾತ್ರೆಗಳಲ್ಲಿ ಅಪಿಮಾಗಲಿ, ವಿಷವಸ್ತುವಾಗಲಿ, ಖನಿಜವಾಗಿ ಸೇರಿಲ್ಲ. ಒಂದೇ ಒಂದು ಈ ಸೀಸೆಯು ನಿಮ್ಮ ಬಳಿ ಇದ್ದರೆ, ವೈದ್ಯರ ಸಮಯವನ್ನು ಸೇರಿಸದ ಸೀವೇ ಅನೇಕ ವ್ಯಾಧಿಗಳನ್ನು ಗುಣಪಡಿಸಬಲ್ಲವ ರಾಗುತ್ತೀರಿ.

250 ರಿಂದ 300 ಮಾತ್ರೆಗಳವರೆವಿಗಿರುವ ಸೀಸೆ 1 ಕ್ಕೆ 4 ಆಣೆ. ಟಪಾಲು ಖರ್ಚಾದರೆ 1 ಸೀಸೆಗೆ 9 ಆಣೆ. 6 ಸೀಸೆಗೆ 1—8—0. 12 ಕ್ಕೆ 2—16—0 25 ಕ್ಕೆ 5—7—0

ಪಾಳ್ಕೆದ ವೆಂಕಟಾಚಲ ಪಂಡಿತ ಅಂಡ್ ಸನ್,

ಶ್ರೀ ಸೀತಾರಾಮವಿಲಾಸ ವೈದ್ಯಶಾಲಾ, ಮೈಸೂರು.

Edited, Printed & Published by Agaram Ranglah, B.A., at Sri Rama Press, D. Subbiah Road, Mysore.



॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರಪತ್ರಿಕೆ.

ಮೈಸೂರು ಮಹಾರಾಜರ ಆಳ್ವಿಕೆಯಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆಯ ಮುಖಪುಟ

ವೈದ್ಯಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಪುಟ ೨] MYSORE : MONDAY 22—11—37 ಮೈಸೂರು ಸೋಮವಾರ ೨೨—೧೧—೩೭ [ಸಂಚಿಕೆ ೪೦

ಹಾತ್ಮರ ಆಡ್ಡಿ

ಮೈಸೂರಿನ ರಾಜಕೀಯ ಚಳುವಳಿಗೆ
ಿ ಭಾರತ ಕಾಂಗ್ರೆಸ್ ಸಮಿತಿಯ
ಸಾನುಭೂತಿಯನ್ನು ತೋರಿಸಿದ್ದಾ
ಯವನ್ನು ನೀಡಬೇಕೆಂದೂ ಹೇಳಿ
ರು. ಈ ವಿಷಯವು ಇನ್ನಿನ್ನ ಅನೇಕ
ತ್ಸಾಹವನ್ನು ಉಂಟುಮಾಡಿತ್ತು. ಆ
ಯಾತ್ಮ ಗಾಂಧಿಯವರು ಈ ಸಮ್ಯೆ
ಯಕ್ಕೆ ಕೈಹಚ್ಚಿದ್ದಾರೆ. ಅಖಿಲ
ತ ಸಮಿತಿಯ ರಠಾವು ಅಕ್ರಮವಾದು
ು ಸೂಚಿಸಿದ್ದಾರೆ ಸಂಸ್ಥಾನಗಳ
ಿ ಅಡಳಿತ ವಿಷಯಗಳಲ್ಲಿ ಕಾಂಗ್ರೆಸ್ಸು
ವೇಶಿಸುವುದಿಲ್ಲವೆಂಬ ನೀತಿಗೆ ಈ ರಠಾ
ವಿರುದ್ಧವಾದುದೆಂದು ಅಭಿಪ್ರಾಯಪಟ್ಟಿ
ರಿ. ಆದ್ದರಿಂದ ಕೆಲವರಿಗೆ ನಿರುತ್ಸಾಹ
ುಂಟಾಗಿದೆ. ಮಹಾತ್ಮರು ದೊಡ್ಡ
ಪ್ತರಿ. ಅವರಲ್ಲಿ ಸರ್ಕಾರದವರಿಗೂ ಪ್ರೆ
ಗಳಿಗೂ ಏಕಪ್ರಕಾರವಾದ ವಿಶ್ವಾಸವಿದೆ.
ರಿಂದ ಅವರ ಅಭಿಪ್ರಾಯಗಳಿಗೆ ಬಹ
ಿಲೆಯುಂಟು. ಆದರೂ ಈ ಸಮಯ
ಲ್ಲಿ ಅವರು ಕೊಟ್ಟಿರುವ ಅಭಿಪ್ರಾಯಗಳು
ಾಜನರಿಗೆ ಸಮಾಧಾನವನ್ನುಂಟು
ಾಡಿಲ್ಲ. ಈಗಾಗಲೇ ಕಾಂಗ್ರೆಸ್ಸಿನವ
ರು, ಜನಜಾಗೃತಿ ಸಂಘದವರೂ, ಸಿವಿ
ರಿಬರ್ಟೀಸ್ ಸಂಘದವರೂ, ಮೈಸೂ
ರು ವಕೀಲರುಗಳೂ ತಮ್ಮ ಅಸಮಾಧಾ
ನವನ್ನು ಸೂಚಿಸಿರುವರು. ಇನ್ನೂ ಅನೇ
ರು ಸೂಚಿಸಲಿರುವರು. ಮೈಸೂರಿನ
ನ ಉತ್ಸಾಹವು ನಿಜವಾಗಿ ಎಷ್ಟರ
ಟ್ಟಿಗಿರಬಹುದೆಂಬ ಅಳತೆಯನ್ನು ಅರಿ
ಲು ನುಹಾತ್ಮರೇ ನಾವರೂ ಈ ಉಪಾ
ಯವನ್ನು ಹೂಡಿದ್ದಾರೊ ?

ಹರಲಾಲರ ವಿವರಣೆ

ತ್ತಲಾಗಿ ಕಾಂಗ್ರೆಸ್ ಅಧ್ಯಕ್ಷರಾದ
ಡಿತ ಜವಾಹರಲಾಲರು ಕಾಂಗ್ರೆಸ್ಸಿನ
ಯಮನ್ನು ಸರಿಪಡಿಸಿರುತ್ತಾರೆ. ಆ
ಯಾತ್ಮ ಕಾಂಗ್ರೆಸ್ಸಿನ ನೀತಿಯು ಎಂದಿ
ಿಯೇ ಅತ್ಯುಳಿಯದೆ ಇದೆಯೆಂದು ಹೇ
ುತ್ತಿ ಆದರೆ ಸಂಸ್ಥಾನದ ಜನರು
ಸುರಿಸುವ ಚಳುವಳಿಯನ್ನಲ್ಲ ಕಾಂಗ್ರೆಸ್ಸಿಗೆ
ಸಂಪೂರ್ಣ ಸಮಾನುಭೂತಿಯುಂಟೆಂದು
ಹೇಳುತ್ತಾರೆ. ಕರ್ನಾಟಕ ಪ್ರಾಂತಿಕ ಕ
ಮಿಟಿಯವರು ಸೈಮೂರಿಗೆ ಎಲ್ಲಾ ಸಹಾ
ಯವನ್ನೂ ನೀಡಬೇಕೆಂದು ಕೋರಿದ್ದಾರೆ.
ಕಾಂಗ್ರೆಸ್ ಸಂಸ್ಥೆಯು ತಾನೇ ಸ್ಥಾಪಿತ
ಸಂಸ್ಥಾನಗಳಲ್ಲಿ ಕಾನೂನು ಭಂಗವನ್ನೆ
ಕೈಗೊಳ್ಳುವುದಿಲ್ಲವಾದರೂ ಸ್ಥಳೀಯ ಜನರು ತಮ್ಮ ಹಕ್ಕುಬಾಧ್ಯತೆಗಳನ್ನು ಸ್ಥಾಪಿಸಲು ತಮ್ಮ ಜವಾಬ್ದಾರಿಯ ಮೇಲೆ ಕೈಗೊಳ್ಳುವ ಎಲ್ಲಾ ಚಳುವಳಿಗೂ ಕಾಂಗ್ರೆಸ್ಸಿನ ಸಹಾನುಭೂತಿಯುಂಟೆಂದು ತಿಳಿಸಿದ್ದಾರೆ. ಮತ್ತು ಮೈಸೂರು ಸರ್ಕಾರದೊಡನೆ ಈ ವಿಷಯವಾಗಿ ಪತ್ರ ವ್ಯವಹಾರ ಬೆಳೆಸುತ್ತಿರುವುದಾಗಿಯೂ ಹೇಳಿದ್ದಾರೆ. ಈ ಪತ್ರ ವ್ಯವಹಾರದ ಪರಿಣಾಮವು ಉಭಯತ್ರರಿಗೂ ಫಲಕಾರಿಯಾಗಲೆಂದು ಹಾರೈಸೋಣ.

ಸರ್ಕಾರದ ನೀತಿಯ ಬದಲಾವಣೆಯೇ

ಬೆಂಗಳೂರಿನಲ್ಲಿ ಹಾಕಿದ್ದ ಸಭಾಬಂಧನದ ಅಜ್ಞೆಯು ಬದಲಾಯಿಸಲ್ಪಟ್ಟಿದೆ. ಬನಪ್ಪಾ ಪಾರ್ಕನಲ್ಲಿ ಮಾತ್ರ ಸಭೆಗೂ ಭಾಷಣಗಳೂ, ನಡೆಯಬಹುದು. ಇತರ ಕಡೆಗಳಲ್ಲಿ ಆಗಬಹುದು. ರಾಜಧಾನಿಯ ಟ್ಟಿಯೂ ಈ ವಿಧವಾದ ನಿರ್ಬಂಧವಿದೆ. ಟೌನ್‌ಹಾಲ್ ಮೈದಾನ, ದೊಡ್ಡ ಕೆರೆ ಮೈದಾನ, ಕರ್ಜನ್‌ಪಾರ್ಕ್, ನಿಷಾ ಬಾಗ್ ಮತ್ತು ಅಂಬಾವಿಲಾಸ್ ಮೈದಾನಗಳಲ್ಲಿ ಸಭೆ ನಡೆಯಬಹುದೆಂದು ಇಲ್ಲಿ ನಿರ್ಬಂಧ. ಇತರ ಸ್ಥಳಗಳಿಗೆ ಅಡ್ಡಿಯಿಲ್ಲ. ಇಂತಹ ನ್ಯಾಯವಾಗಿ ಅನಗತ್ಯವಾಗಿದ್ದರೂ ಯಾರೂ ಆವುಗಳನ್ನು ಉಪಯೋಗಿಸಿದಲ್ಲಿ ಪ್ರತಿಭಟಿಸುವುದಿಲ್ಲ. ಎಲ್ಲೆಲ್ಲೂ ಏನೂ ನಡೆಯಕೂಡದೆಂದರೆ ಮಾತ್ರ ಬರುತ್ತೆ ತೊಂದರೆ. ಈಗ ಬೆಂಗಳೂರು ಮೈಸೂರಿನಲ್ಲಿ ಈ ವಿಚಾರದಲ್ಲಿ ಜನಸರಿಸಿರುವ ನೀತಿಯು ಜನರಿಗೆ ವಿಶೇಷ ಅಸಮಾಧಾನವನ್ನುಂಟುಮಾಡಿಲ್ಲಾವರೆಮು. ಈ ನೀತಿಯು ಕಾಂಗ್ರೆಸ್ಸಿನ ವಿಷಯದಲ್ಲಿ ಸರ್ಕಾರದ ಹೃದಯಪರಿವರ್ತನೆಯು ಸೂಚನೆಯಾಗಿ ಪರಿಣಮಿಸುವುದೆ ?

ಕಂದಾಯ ಕಡಿಮೆಯೊಯಿತು

ಸೈಸೂರು ಸರ್ಕಾರದವರು ಜಮೀನು ಕಂದಾಯದಲ್ಲಿ 1,98,000 ರೂಪಾಯಿಗಳನ್ನು ಕಡಿಮೆ ಹಾಕಿ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಟಿಪ್ಪು ಕಂದಾಯವು ಇನ್ನು ಮೇಲೆ ಎಕರೆಗೆ 2-12-0 ಗಿಂತ ಹೆಚ್ಚಾಗಿರಕೂಡದೆಂದು ತೀರ್ಮಾನಿಸಿರುವರು. ಮರೆನಾಡು ಪ್ರಾಂತಕ್ಕೆ ಬಾಗಾಯ್ತು ಒಮೀನುಗಳ ಮೇಲೆ ೯೮ ಯಂತೆ ಕಡಿಮೆ ಹಾಕಬೇಕೆಂದು ಸಹ ಸೂಚನೆ ಮಾಡಿರುವರು. ಇವೆಲ್ಲಾ ಮಾಹಿತಿಗಳಿಂದ ಸರ್ಕಾರಕ್ಕೆ ಮೇಲ್ಕಂತ ನಷ್ಟವು ಉಂಟಾಗುತ್ತದೆ. ಈ ವಿಷಯವಾಗಿ ಪ್ರಜಾ ಪ್ರತಿನಿಧಿ ಸಭೆಯಲ್ಲಿಯೂ ನ್ಯಾಯವಿಧಾಯಕ ಸಭೆಯಲ್ಲಿಯೂ ತೀಕ್ಷ್ಣ ವಿನಗಳಂದ ಸಲಹೆ ಬರುತ್ತಲೇ ಇತ್ತು. ಸರ್ಕಾರದವರು ಈಗ ಇದಕ್ಕೆ ಗಮನ ಕೊಟ್ಟಿದ್ದಾರೆ ಕಾಂಗ್ರೆಸ್ಸಿನ ಚಳುವಳಿಯು ಬಲವಾದುದರಿಂದ ಇವ್ಮು ತ್ವರೆಯಿಂದ ಸರ್ಕಾರದವರು ಈ ರಿಯಾಯಿತಿಯನ್ನು ಕೊಟ್ಟಿರುವರೆಂದು ಮಾ ತಂಗಲಾಯಕೆ ಡ್ತಿಯವರು ಹೇಳಿರುವರು. ಹೇಗಾದರೂ ಜೋಳೇಗೌಡನಿಗೆ ಒಕ್ಕಲಿಮಾವಿನೆ ಸರಿ

ಬಂಗಾಳಾ ಜೈದಿಗಳ ಖುಲಾಸೆ

ಬಂಗಾಳದಲ್ಲಿ ಹೆಲವು ಬಗೆಯ ನಿರ್ಬಂಧಗಳಿಗೆ ಒಳಗಾಗಿದ್ದ ಗಾಂಧಿ ಜನ ರಾಜಕೀಯ ಖೈದಿಗಳನ್ನು ಅಲ್ಲಿನ ಸರ್ಕಾರದವರು ಖುಲಾಸೆ ಮಾಡಿದ್ದಾರೆ. ಇದಕ್ಕಾಗಿ ಮಹಾತ್ಮ ಗಾಂಧಿಯವರು ಬಹಳ ಪ್ರಯಾಸ ಪಟ್ಟಿರುವರು. ತಮ್ಮ ಅಹಿಂಸಾಪ್ರಕಾರ ಪ್ರಭಾವವನ್ನೆಲ್ಲಾ ಉಪಯೋಗಿಸಿದರು. ಈ ಖೈದಿಗಳೆಲ್ಲರೂ ತರುಣರು, ವಿದ್ಯಾವಂತರು, ಶ್ರೀಮಂತಿಕಾನಿಗಳು. ವಿಚಾರಣೆಯೇ ಇಲ್ಲದೆ ಅವರು ಗುನ್ನಾನಿಯ ಮೇಲೆ ಬಂಧನದಲ್ಲಿ ಕೊಳೆಯುತ್ತಿದ್ದರು. ಈಗ ಕವೆಲ್ಲರೂ ಖುಲಾಸೆಯಾಗಿರುವುದು ಅನೇಕರಿಗೆ ಸಮಾಧಾನವನ್ನುಂಟುಮಾಡಿದೆ. ಅವರುಗಳಿಗೆ ಪ್ರಮುಖ ವರ್ತಕರುಗಳು ಔತಣವನ್ನು ಕೊಟ್ಟು ಅವರುಗಳು ಸರಿಯಾದ ಮಾರ್ಗದಲ್ಲಿ ವರ್ತಿಸುವಂತೆ ಸಹಾಯ ಮಾಡಬೇಕೆಂದು ಸರ್ಕಾರದವರು ಕೋರಿದ್ದಾರೆ. ಇನ್ನೂ ಅಂಡಮಾನ್ ಖೈದಿಗಳನ್ನು ಬಿಡಿಸಲು ಮಾಡುವ ಪ್ರಶ್ನೆಯು ಬಗೆ ಹರಿದಿಲ್ಲ. ಬಂಗಾಳದ ಕಾಂಗ್ರೆಸ್ ಪ್ರಾಂತವಾಗಿದ್ದರೆ ಅವರನ್ನೆಲ್ಲಾ ಬಿಟ್ಟು ಅರು ತಿಂಗಳಾಗುತ್ತಿತ್ತು.

ಕಳ್ಳನಿಗೊಂದು ಖಿಲ್ಮನೆಜ

ಸ್ಪೆಮನ್ ಪೇಠದಲ್ಲಿ ನಡೆಯುತ್ತಿರುವ ದೊಂಬಿಯು ಮುಂದಾದ ಜನರಲ್ ಫ್ರಾಂಕೋವಿಗೆ ಜಯ ಮಾಲ್ಯಾರ್ಪಣೆ ಮಾಡಲು ತನ್ನ ಸಂಪೂರ್ಣ ಸಮಾನುಭೂತಿಯನ್ನು ಸೂಚಿಸಿರುತ್ತದೆ. ಫ್ರಾಂಕೋರವರು ಯುದ್ಧ ಮಾಡುತ್ತಿರುವರಂತೆ. ಫ್ರಾಂಕೋರವರ ನೀತಿಯೂ ಜಪಾನಿನ ನೀತಿಗೆ ಸರಿ ತೋಲುವುದಂತೆ. ಕಮ್ಯೂನಿಸ್ಟ್ ಚಳುವಳಿಯನ್ನು ನಿರ್ಮೂಲ ಗೊಳಿಸುವುದೇ ಫ್ರಾಂಕೋರವರ ಉದ್ದೇಶವೆಂದು ಜಪಾನು ಅಂಗೀಕರಿಸಿರುತ್ತದೆ. ಆದ್ದರಿಂದ ಜಪಾನು ಆತನಿಗೆ ಬೆಂಬಲ ಕೊಟ್ಟಿದೆ ಹೆಂಗೇರಿಯು ಸಹ ವ್ಯಾಂಕೋವಿನ ಅಧಿಕಾರವನ್ನು ಒಪ್ಪಿರುತ್ತದೆ. ಈ ಅಂಗೀಕಾರಗಳ ಒಳಗೆ ಏನೇನು ಸಂಧಾನಗಳಿರಬಹುದಲ್ಲವೆ. ?

ಆಕಾಶವಾಣಿ ಕಾರ್ಯಕ್ರಮ

22 . ಸೋಮವಾರ 8 ರಿಂದ 9-30 ಪರೋಕ್ಷ ಸಂಗೀತ, "ಪ್ರಾಥಮಿಕ ರಕ್ಷಣೆ" ಗ್ರಂಥ ಪಠನ—23 ಮಂಗಳವಾರ 6 ರಿಂದ 8-30 ಕರ್ನಾಟಕ ವಾದ್ಯಗಾನ, ಗೀತಾ ಉಪನ್ಯಾಸ, ಮಹಾರಾಜ ಕಾಲೇಜಿನ ಶ್ರೀ ಎಂ ಎ. ವೆಂಕಟರಾಯರಿಂದ—24 ಬುಧವಾರ 6 ರಿಂದ 6-15 ಗಾನ, ವಿದ್ವಾನ್ ಮರಿಯಪ್ಪನವರಿಂದ ; 25. ಗುರುವಾರ ನಾಟಕ "ದಾನಶೂರ ಕರ್ಣ" ಶ್ರೀ ಸರಸ್ವತಿ ವ್ಯಾಸಾದಿಕ ನಾಟಕಸಭೆಯಿಂದ ರಿಂದ—26 ಶುಕ್ರವಾರ 6 ರಿಂದ 6-15 ಹಿಂದೂಸ್ಥಾನಿ ಸಂಗೀತ. ಉರ್ದು ಸಾಪ್ತಾಹಿಕ ಪತ್ರಿಕೆ ಶನಿವಾರ ರಜಾ —ಪ್ರತಿದಿನವೂ ಮೈಸೂರು ಪುದ್ದಿಗಳು ಕೊಡಲ್ಪಡುತ್ತವೆ.

ಈ ವಾರದ ಕಥೆ

ಪುಟ್ಟಜ್ಜಿ

ಲೇಖಕರು.—ಶ್ರೀಳಿ ಜಿ. ಕೆ. ಹಾವಂಜೆ, ಮೈಸೂರು

ಎಂದರೆ ಅಜ್ಜಿಯ ಹೆಸರು "ಪುಟ್ಟಜ್ಜಿ" ಎಂದಲ್ಲ. 'ಪುಟ್ಟಿ' ಎಂದರೆ ಚಿಕ್ಕ ಅಜ್ಜಿ ಎಂದು.

ಎಲ್ಲರಿಗೂ 60-70 ವರುಷದ ಅಜ್ಜಿ ಇದ್ದರೆ ನನಗೆ 16 ವರುಷ ವಯಸ್ಸಿನ ಅಜ್ಜಿ. ಅಜ್ಜನಿಗೂ ಸಣ್ಣ ವಯಸ್ಸೇ. ಅಲ್ಲಿನವರೂ ಪರಿಶ್ರಮ ಎರಡುವಲು ಹಲ್ಲು ಬಿದ್ದು ಮೂರನೆಯ ಸಲ ಹಲ್ಲು ಹುಟ್ಟುವ ಸಮಯ. ಗುಲಾಬಿಗೆ ಒಂದೇ ಒಂದು ಹಳೆಯ ರಲ್ಲು ಇತ್ತು (ತರೂ ನನ್ನ ಪುಟ್ಟ ಅಜ್ಜಿಯ ಪೂರ್ಣ ಪ್ರೀತಿಫಲದಿಂದ)

ಅಜ್ಜಿಯ ಹೆಸರು "ಇಂದಿರಾ" ಎಂದು ನಿಜವಾಗಿಯೂ ಇಂದಿರೆಯು ಹಾಗೆಯೇ ರೂಪು. ಆದರೆ ಅಜ್ಜನು ಇಂದಿರೇಶನ ರೂಪಾಗಿದ್ದನೆ? ಅಸ್ಸೆ ಅವರಿಬ್ಬರಲ್ಲಿ ನ ಸ್ಪ ಪ್ರನ ಮೊಸಳೆದರು—ತವರುಗೂ ನಲ ಪತ್ನಿಯಿಂ ಎಂಬಿನ್ನು ಸ್ವಲ್ಪ. "ಮೊದ್ಲ ಕಿಜ ನಿಗೆ ಗನ್ನ ಹೂ ನೆ" ಎಂಬ ನಾನು ವಾಗ ಅಂತಹಿನಿಸ್ಥಿಸಿದ್ದೆ ಜಾನ, ಧರ್ಮ ಎಂದರ ಅದೆಷ್ಟೊ ಎವರಿಗೂ "ತಲ್ಪನಿಯಾ ಚಕ್ರವರ್ತಿಗಳಿಗೂ ಮು ಸಾನಿನಿಗೂ ಇರುವ ಪೈತ್ಯ" ಸೊರು ಕಾಸು ರಷ್ಟಿನೆ ಎಂದರೆ ಮೊನಾ ಪೈಲಿ ಯಾವರೂ ಹೋಗುತ್ತಿದ್ದರು ಇಂತಹ ಮಮಗಳಿರ ಕೈಗೆ ನಸ್ಸುಜ್ಜ ಪುಟ್ಟ ಅಜ್ಜಿ ಗೋಸ್ಕರ ಒಂಮನಾನಿರಪೈಸಾರು ರೂ. ಇಟ್ಟರೆ ಅದನ್ನು ತೆಗೊಳ್ಳಲಿ ಸುಮ್ಮನೆ ಬಡಜರೆ? ಹೊದ ಗಂಟಿನ ಮುಂದ 'ಇಂದಿರಾ" ಅಜ್ಜಿಯ ಮುಂದಿನ ಸುಖ ಪ ನೆನವು ಕೂಡ ಅವರಿಗೆ ಬಂದಾಗಲಿಲ್ಲ.

ಅಜ್ಜನಿಗಾದರೋ 'ಇಂದಿರಾ' ಅಜ್ಜಿಯ ಸೇಲೆ ಬಹಳ ಪ್ರೇಮ. 'ಇಂದಿರಾ' ನಾಮ ಹೆಸರಿನ್ನಿಯೇ ಅಜ್ಜನ ಆನಂದ ಉಕ್ಕಾಗಿದ್ದಿತು. 'ಇಂದಿರಾ" ಎಂದರೆ ಅಜ್ಜನಿಗೆ ಒಂದು, ಒಂದೇ ದೆತ್ತು ಆಮನೆ ರಿಂದ ಬ್ಯಟ್ಟಿಯಲ್ಲಿ ಮನಸ್ಸನ್ನೊಲಿಸಲು ಜಾತಕ್ಕೊಂದು ದರ್ಜಾವರೆಗೆ ಸೀರೆಯ ನ್ನು ಅಜ್ಜ ತರುತ್ತಿದ್ದ. ಪ್ರತಿ ದಿವಸ ನ್ತಿ ಬಜರಿಗೆ ಅಂಗಡಿ ಹೂ ಮುಡಿದುಕೊಂ ಹೆರಲು ಎಂಜನಿಗೆ ಸನೂಷಾನೆ ಆದು ರಿಂದ ಅಜ್ಜನ ಸ್ಪರ್ಶದಿನದ ದಿನವರಿ ಎಂದರೆ ಪುಟ್ಟಜ್ಜಿಯನ್ನು ಸಿಂಗಲಿಸಿ ನೋಡಿ ತಾನಂದಸಮುದ್ರವು. ಇಷ್ಟೇ!

ಇನ್ನೊಂದು ಸ್ವಾರಸ್ಯ ಎಂದರೆ 'ಅಜ್ಜಿ" ಗೆ "ಅಜ್ಜಿ" ಎಂದರ ಕೋಪ ಬಂದು ಬಿಡುವುದು. ಕೋಪ ಎಂದರೆ ಹೊಡೆಯುತ್ತಿದ್ದಿಲ್ಲ ಬೈಗುಳುತ್ತಿದ್ದಿಲ್ಲ. ಮನ ಸ್ಸಿಗೆ ಬೇಸರವಾಗುವುದೆ. 'ಪುಟ್ಟಜ್ಜಿ' ಎಂ ಮ ಕರೆದಾಗೆಲ್ಲ ಎರಡು ಕೆಂಗಿಟ್ಟು ನೀರು ಯುತ್ತಿದ್ದರು ಕಣ್ಣುಗಳಿಂದ; ಇಲ್ಲವೆ ಅಂಜಿಸಿಮುಖ ತಿರುಗಿಸಿಕೊಂಡು ಬಿಡುತ್ತಿದ್ದರು ಎಂಮೊಮ್ಮಗಳು ಕಣ್ಣಾ ಕೆಂಪಗೆ ಮಾಡಿ ನೋಡುತ್ತಿದ್ದರೂ. ಹೀಗೆ ಒಂದಿರ್ಲೊಂದು ರೀತಿಯಲ್ಲಿ ತಮ್ಮ ಮನ ಸ್ಸಿನ ಅಸಮಾಧಾನವನ್ನು ತೋರ್ಪಡಿಸು ತ್ತಿದ್ದರು.

೦ ೦ ೦

ಈಗಾಗಲೆ ಅಜ್ಜನಿಗೂ ಪುಟ್ಟಜ್ಜಿಗೂ ಸುಮನೆಯಾಗಿ ಬಿದ್ದು ವರುಷ ಕಳೆದುವು. ಅಜ್ಜಿಗೆ ಹತ್ತಿಪ್ಪತ್ತಿಂಬತ್ತು ವರುಷವಾಗ. ಈಗ ಅವರಿಗೆ ಯಾವದರಲ್ಲಿಯೂ ಕೊರತೆಯಿಲ್ಲ. ಕೇಳಿದ್ದನ್ನು ಕೊಡಿಸುವ, ಹೇಳಿದಂತೆ ಕು ಣಿಯುವ, ಹೆಂಡತಿಯನ್ನು ಬಹು ಮುದ್ದಿ ನಿಂದ ನೋಡುವ ಮುದಿ ಗಂಡನಿರುವಾಗ ಯಾತರ ಕೊರತೆ?

ಆದರೆ ಅಜ್ಜಿಗೆ ಸೌಖ್ಯ ಯಾವಾಗಲೂ ಮನಸ್ಸಿಗೆ ತಮಂಗಿಲ್ಲ ಏನಾದರೊಂದು ನೂತಾಮಿಸಿದರೆ ಪ್ರಾಣವಿಟ್ಟು. ಇಲ್ಲವಿದ್ದಾ ಕೆ ಇಲ್ಲ ಬರಬಹುತ್ತ ಅಜ್ಜ ದರುತ್ತಿದ್ದ ದ್ಯಂಗಾರ ವಸ್ತುವಿನ ಮೇಲೆಯೂ ಅಜ್ಜಿಗೆ ಜಿಗುಪ್ಸೆ. ಹೆಚ್ಚೇನು? ಅವರ ಮೀಸೆಯೇ ಅವರಿಗೆ ಜಿಗುಪ್ಸೆಯಾಗಿ ಕಾಣಲಾರಿತು.

೦ ೦ ೦

ಒಂದು ದಿನ ರಾಯಂಕಾಲ ನಾನೂ ಅಜ್ಜನೂ ಹೊಸ ತಿನ್ನಲಿಕ್ಕೆಂದು ಹೊರಟೆ ವರು ಮಾಗೇ ಸುತ್ತಾವಿಕೊಂಡು ಮನೆಗೆ ಬಂದೆವು. ಬರುವಾಗ ಅಜ್ಜ ಅಜ್ಜಿಗೋ ಸ್ಕರ ಸುಂದರವಾದ ಗುಲಾಬಿ ಹೂವನ್ನು ಕೊಂಡುಕೊಂಡನು ಅದನ್ನು "ಇಂದಿರಾ ' ಅಜ್ಜಿಗೆ ಕೊಟ್ಟು ಅವರನ್ನು ಸಂತೋಷಪಡಿಸಿ ಅವರು ಸಂತೋಷಿಸುವುದನ್ನು ತಾನೂ ನೋಡಿ ನಲಿಯಬೇಕೆಂದು ಮನಸ್ಸಿನಲ್ಲಿ ಯೋಚಿಸುತ್ತಿದ್ದನು.

ನಾವು ಮನೆಗೆ ಬಂದು ಒಳಗೆ ಹೋಗಿ ನೋಡಲು ಅಲ್ಲ "ಇಂದಿರಾ" ಅಜ್ಜಿ ಇದ್ದಿಲ್ಲ ಅವರು ಮನೆಯ ಹಿಂದುಗಡೆ ಬಿತ್ತಿಲಲ್ಲಿದ್ದರು. ಬಿತ್ತಿಲೆಂದರೆ ಸಣ್ಣ "ಪಾರ್ಕಿ" ನಂತಿತ್ತು. ಅದರಲ್ಲಿ ಎರಡು ಮೂರು ಕಲ್ಲು ಬೆಂಚುಗಳೂ ಇದ್ದುವು. ಅದರಲ್ಲೊಂದರ ಮೇಲೆ 'ಇಂದಿರಾ" ಅಜ್ಜಿ ಕುಳಿತುಕೊಂಡು ಯಾವುದೋ ಒಂ ದು ವಸ್ತುವಿನ ಕಡೆ ನಟ್ಟ ದೃಷ್ಟಿಯಿಂದ ನೋಡುತ್ತಿದ್ದರು. ನಿರಾಶೆಯನ್ನು ಸೂಸು ವ ಮುಖ ಬಂಗಿ. ಅದರಿ ಅಜ್ಜ ಇದಾ ವುದನ್ನೂ ಗಮನಿಸಲಿಲ್ಲ. ಗುಲಾಬಿ ಹೂ ವನ್ನು ಕೊಡಲು ಅಜ್ಜಿಯ ಪಕ್ಕಕ್ಕೆ ಸರಿ ದನು.

ನಾನು ಮಾತ್ರ "ಇಂದಿರಾ" ಅಜ್ಜಿ ನೋಡುತ್ತಿರ್ದ ಕಡೆಗೆ ದೃಷ್ಟಿ ಹೊರಳಿಸಿದೆ ಆ ಸಣ್ಣ "ಪಾರ್ಕಿ" ನಲ್ಲಿ ಬಾಜಿ ಹೂ ವಿನ ಬಳ್ಳಿ ಹಬ್ಬಿದ್ದ ಚಿಪ್ಪರ ಒಂದಿತ್ತು. ಅದರಲ್ಲಿರಡು ಗುಬ್ಬಚ್ಚಿಗಳು ಒಂದಕ್ಕೊಂ ಮು ಮುತ್ತಿಟ್ಟುಕೊಳ್ಳುವುದೋ ಎಂಬಂತೆ ಕೊಕ್ಕಿನಿಂದ ಕೊಕ್ಕಿಗೆ ಉಜ್ಜುತ್ತಿದ್ದವು! "ಇಂದಿರಾ" ಅಜ್ಜಿ ಆ ದೃಶ್ಯವನ್ನು ನೋಡಿ ನಿಟ್ಟುಸಿರು ಬಿಡುತ್ತಿದ್ದರು.

• • •

ಎಂದಿಗಿಂತ ಆ ದಿನ ಸಾಯಂಕಾಲ "ಇಂದಿರಾ" ಅಜ್ಜಿ ಹೆಸರುಖದಿಂದ ಇ ದ್ದರು ಅಜ್ಜನನ್ನೂ, ನನ್ನನ್ನೂ, ಎಲ್ಲರ ನ್ನೂ ನಗುನಗುತ್ತಲೆ ಮಾತಾಡಿಸುತ್ತಿದ್ದರು. "ಪುಟ್ಟಜ್ಜಿ" ಎಂದರೆ ಕೋಪಿಸಿ ಕೊಳ್ಳುತ್ತಿದ್ದಿಲ್ಲ ಯಾವ ವಿಧವಾದ ಅ ಸಮಾಧಾನವನ್ನೂ ಸೂಚಿಸುತ್ತಿದ್ದಿಲ್ಲ. ಆ ದರಿಂದ ನಮಗೆಲ್ಲ ಸಂತೋಷ, "ಇಂದಿ ರಾ" ಅಜ್ಜಿಯ ವೈಖರಿಯ ಜೀವನವು ಸಂ ತೋಷಕ್ಕೆ ತಿರುಗಿತಲ್ಲಾ ಎಂದು

ಆ ದಿನ ನಾನು ಜೇಕೆಂತಲೇ 'ಇಂದಿ ರಾ" ಅಜ್ಜಿ ಬಾಯಿಮಾಡುತ್ತಿರುವಾಗ ಕೇ ಳಿದೆ, "ಪುಟ್ಟಜ್ಜಿ! ಈಗ ನಿಮಗೆ ಹೊದ ಲಿನವಾಗೆ 'ಪುಟ್ಟಜ್ಜಿ" ಎಂದರೆ ಸಿಟ್ಟು ನ್ಲವೆ?"

"ಇಲ್ಲ! ಸಿಟ್ಟು" "ಅದೇನು ಪುಟ್ಟ ಜ್ಜ? ಹೊದಲು "ಪುಟ್ಟಜ್ಜಿ ಎಂದರೆ ನಮ್ಮನ್ನು ಕಣ್ಣು ಕೆಂಪಗೆ ಮಾಡಿ ನೋ ಡುತ್ತಿದ್ದಿರಿ ಇಲ್ಲದೇ ಮುಖವನ್ನು ಬೇರೆ ಕಡೆ ತಿರುಗಿಸಿಬಿಡುತ್ತಿದ್ದಿರಿ"

"ಹೌದಜ್ಜ! ನನ್ನ ಹೆಣ್ಣಿಯಜ್ಜೀ ಬಾಗೆ ಬರೆದಿರುವಾಗ ಹಾಗೇಕೆ ಸಿಟ್ಟುಮಾಡ ಬೇಕೆಂಬ ನನಗಾರೋಚನೆ ಮಬ್ಬಿದೆ" ನಾನು ಇದನ್ನು ಏನೇನೋ ಕೇಳಬೇಕೆಂದಿ ದ್ದೆ, ಆದರೆ ಅಜ್ಜ ಬಂದುಬಿಟ್ಟದ್ದರಿಂದ ಅಲ್ಲಿಂದ ನಾನು ಹೊರಟು ಬಿಟ್ಟೆ,

ಮರುದಿನ ಬೆಳಿಗ್ಗೆ ನಮ್ಮ ನೋಡಲು ಪುಟ್ಟಜ್ಜಿಯ ಪತ್ರವೇ ಇಲ್ಲ ಮನೆಯಲ್ಲಿ! ಎನ್ನುವ ಕತೆ ಹುಡುಕುವ್ದೂ ಆಯಿತು. ಎಲ್ಲೆಲ್ಲೂ ಇಲ್ಲ ಪುಟ್ಟಜ್ಜಿ. ಈ ಸುದ್ದಿ ಚಾರ ಪುಟ್ಟಜ್ಜಿಯ ತಂಸೆಯವರಿಗೂ ತಿಳಿ ಮ ತವರೂ ಒಂದು ಅಜ್ಜನಿಗಂತೂ ದಿಕ್ಕೇ ತೋಚದಾಯಿತು. ಏನಾದರೇನು? ಪುಟ್ಟಜ್ಜಿಯೇ ಇಲ್ಲ.

ಅಸ್ಟು ಹೊತ್ತಿಗೆ ನಾಯಿಡ (ನನ್ನ ತಮ್ಮ) ಎಲ್ಲೋ ಹುಡುಕಿ ಒಂದು ಕಾಗದ ವನ್ನು ತಂದು ಕೊಟ್ಟನು ಅಜ್ಜನ ಕೈಲಿ. ಅವರದನ್ನು ಓದಿಕ್ಕೆಂದು ನನ್ನ ಕೈಲಿ ಕೊಟ್ಟರು. ಅದೇ ಪುಟ್ಟಜ್ಜಿಯು ಬರೆದಿಟ್ಟ ದ್ದ ಪತ್ರ "ನನ್ನನ್ನು ಯಾರೂ ಹುಡಕ ಬೇಡ. ಹುಡುಕಿಸಿದರೆ ನಾನು ಸಜೀವಿಯಾಗಿ ಸಿಗಲಿಕ್ಕಿಲ್ಲ. ನನ್ನಿಂದ ನಿ ಮ್ಮ ವಂಶಕ್ಕೆ ಅಪವಾದ ಬರುವಂತಹ ಕೆಲಸವು ಒಂದಿಲ್ಲೊಂದು ಸಮಯದಲ್ಲಿ ಆಗಬಹುದಾದುದರಿಂದ, ಅದು ಆಗದಂತೆ ಮೊದಲೇ ಆಲೋಚಿಸಿ ಈ ಪ್ರಸಂತದಿಂದ ಲೇ ಹೊರಗಾಗಿದ್ದೇನೆ. ಇಷ್ಟೇ ಕಾರಣ. ಇತಿ ನಿರ್ಧಾರ್ಯ, ಇಂದಿರೆ ಇದಿಷ್ಟು ಅ ದೃಶ್ಯವಲ್ಲಿತ್ತ ಸಾರಾಂಶ

ಇದು ನಡೆದು ಮೂರು ದಿವಸವಮೇಲೆ "ಪುಟ್ಟಜ್ಜಿ"ಯ ಮೃದು ದೇಹವು ನಮ್ಮೂ ರ ಕೆರೆಯಲ್ಲಿ ತೇಲುತ್ತಿತ್ತು. ಅಮೇಲೆ ನಮೆ ಯವುದೆಲ್ಲ ನಡೆದೇ ಹೋಯಿತ್ತಿಷ್ಟೆ!

ಆದರೆ "ಪುಟ್ಟಜ್ಜಿ ಯ ಜೀವನವು ಸಾ ವಿರವೈನೂರು ರೂಪಾಯಿಗಳ ಮೂಲಾ ಮುದಿಕನ ಮದುವೆಗೆ ಸಮರ್ಪಣೆಯೂ ಯಿತು.

ಕರ್ನಾಟಕ ಆಯುರ್ವೇದ ಸಮ್ಮೇಳನ

ರಾಯಚೂರು.

ಪ್ರಕಟನೆ.

ಸಮ್ಮೇಲನದ ಕಾರ್ಯಾಲಯವನ್ನು ಪ್ರಕಟಿಸಿದ ಎಂದನೆ ಪ್ರಕಟನೆಯಲ್ಲಿ ಪ್ರ ನಿಧಿಗಳ ರುಜುವಾತ್ನ ನವಂಬರ್ ಇ ರಿಗೆ ಮೊಳಗಾಗಿ ಕಳುಹಿಸಬೇಕೆಂ ಪ್ರಕಟಿಸಲಾಗಿತ್ತೆ ಆದರೆ ಅನೇಕ ಪ್ರ ನಿಯರಿಂದ ಈ ಅವಧಿ ಹೆಚ್ಚಾ ಕೆಂದು ಕಾಗದಗಳು ಬಂದುದರಿಂದ ಪ್ರತಿನಿಧಿಯತ್ವದ ರುಜುವಾತ್ನು ಅಧಿವೇ ನವು ಪ್ರಾರಂಭವಾಗುವ ದಿನ ನಕ್ಕ ಸ್ವೀ ರಿಸಲಾಗುವದು. ಆದರೆ ಬಹು ದೂರದಿಂ ಬಬವರಿಗೆ ಯಾವ ಬಗೆಯ ಅಡ ಕೂಲವಾಗದೆಯಾಗೆ ವ್ಯವಸ್ಥಾಮಾಡ ನನಗೆ ಅನೆಕೂಲವಾಗಲು ಪ್ರತಿನಿ ಳಾಗಲು ಇಚ್ಛಿಸುವವರು, ಆದಷ್ಟು ಬೇ ತಮ್ಮ ಹೆಸರನ್ನು ಪ್ರತಿನಿಧಿ ಫೀಸನ್ನೂ ಳುಹಿಸಬೇಕಾಗಿ ಬೇಡಿಕೊಳ್ಳುತ್ತೇನೆ.

ಈ ಸಲದ ಸಮ್ಮೇಲನವು ಅತಿ ವ ತ್ವವಿದ್ದುದರಿಂದ ಹೆಚ್ಚು ಪ್ರತಿನಿಧಿಗ ಬರುವ ಸಂಭವನವಿದೆ. ಈಗಾಗಲೇ ಬ ರ್ನಾಟಕದಿಂದಲೂ ಮಂಗಳೂರು, ಬೆ ಊರು ಮುಂತಾದ ಸ್ಥಳಗಳಲ್ಲಿಯೂ ಅ ಕರು ಪ್ರತಿನಿಧಿಗಳಾಗಿ ಪ್ರತಿನಿಧಿಯತ್ವ ರುಜ್ಜ (ಫೀ)ವನ್ನು ಕಳುಹಿಸಿದುವರು ಹೆಚ್ಚು ಬಂದು ವಿಶೇಷ ಗೌರವವಾಗು ದೆಂದು ಈಗಿಂದಲೇ ಅನಿಸುವಷಾ ನಾವು ಅವಶ್ಯ ಇರಬಲು ಭೋಜನ ಉತ್ತಮ ರೀತಿ ವ್ಯವಸ್ಥಾಮಾಡಲು ಸುತ್ತಿದ್ದೇವೆ. ವೈದ್ಯ ನಕಲ ವೈದ್ಯ ಪ್ರತಿನಿಧಿಗಳಾಗಿ ಪ್ರತಿನಿಧಿಯತ್ವದ ರೂ. ೧೫—೦—೦ ಕಳುಹಿಸಿ ನ ಕಾರ್ಯದರ್ಶಿ ಸಹಾಯಕರಾಗಬೇಕೆಂ ನಮ್ಮ ವಿನಂತಿ

ಈ ಸಲ ಸಮ್ಮೇಲನದಲ್ಲಿ ಕಾಯ ತಜ್ಞಿಸ್ಯಾ ಸಂಘಾಸ ಪರಿಷತ್ತಿಗೆ ಸ್ಥಿ ಆಯ್ಕಾಅನುತಾಚಾರ್ಯರು ಆಯ್ಕೆಸಿಸ ಲು ಸಮ್ಮತಿಸಿದುವರೆಂದು ತಿಳಿಸಲು ಕೋಷವಾಗುತ್ತವೆ

ಬೆಕ್ಕನ್ನು ಹಿಡಿಯುವ ಇಲಿಗಳು

ಬೆಕ್ಕುಗಳನ್ನು ಇಲಿಗಳು ಹಿಡಿಯುವ ನ್ನು ನೋಡಿದ್ದೇವೆ ಇಲಿಗಳು ಬೆಕ್ಕನ್ನು ಹಿಡಿಯುವುದನ್ನೂ ಎಲ್ಲಿಯೂ ಕೇಳಿ ಈ ನಾಗರೀಕ ಕಾಲದಲ್ಲಿ ಇಲಿಗಳೂ ಬೆ ಮುಂದುವರಿಯುತ್ತಿವೆ. ಚೀನಾದೇಶದ ವಿನಾಶ್ ಎಂಬ ಗ್ರಾಮದಲ್ಲಿ ಇಲಿಗ ಬೆಕ್ಕುಗಳನ್ನು ಹಿಡಿಯುತ್ತವೆ. ಆ ನೋಡಲು ಅನೇಕರು ಅಲ್ಲಿಗೆ ಹೋಗು ವರು. ಇಲಿಗಳು ಗುಂಪಾಗಿ ಇರು ಬೆಕ್ಕು ಬಂದರೆ ಒಂದು ಇಲಿಯು ಮೆಲ್ಲ ಕ್ಕೆ ಬರುವುದು. ಅದರ ನೋಡಿ ಬೆ ಬೇಗನು ಎಂಬಾಗ ಉಳಿದ ಇಲಿಗಳೆಲ್ಲ ಅದರ ಹಿಂದೆ ಬಿದ್ದು ಅದನ್ನು ಕೊಂ ಮಾಡುವುವು.

ಪಂಜಾಬ್ ಕೇಸರಿ
ಲಾಲಾ ಲಜಪತರಾಯರವರು

ಲೇಖಕರು.—ಸೌಭಾಗ್ಯವತಿ ಬಿ. ಎಸ್. ಇಂದಿರಮ್ಮ, ಮೈಸೂರು.

ಾಷ್ಟ್ರ ಕರಿದಾಸ ದೇಶಮಾತೆಯ
ಪಾದ।
ಸ್ಥಾಲಾ ಪಾಸರಲಿ ಮೊದಲಕರಿಸು
ದಿಷ್ಟ।
ಾಗನನೇ ನಂಬಿ ಸರಿಯಾಸನಗತ್ತ
ಮನು।
ರಸಾತೆಯ ಮಾಸ ಧರೆಯಲ್ಲಿ ಕೀರ್ತ್ಯ
ಮತುರಂಗಳೆಂಡವನಿಗೆ॥

ಈ ನಾತು ಅಕ್ಷರಶಃ ನಿಜ ದೇಶರಕ್ಷ
ಸ್ಥಾಪಿಸಿ ಸಮಿತ್ಯಾಗಮಾಡಿ, ದೇಶ
ಮೋ ಬಿದ್ದ ಕತ್ರುಗಳೊಡನೆ ಹೋ
ಸ್ಥಿರ್ಮಿಸಿದ, ತನ್ನಲ್ಲಿ ಶಕ್ತಿಯಿರುವ
ಂಬುವ ಭೂಮಿಯಲ್ಲಿ ಕಾದಾಡಿ
ಮಾಡಿದ್ದಲ್ಲ ರಣರಂಗದಲ್ಲಿ ಧೀರ
ರ್ಯವನ್ನು ಹೊಂದಿ ದೇಶಮಾತಾ ಜ
ಕ್ಕಾಗಮಾಡಿಕೊಂಡು ಪ್ರತಿಯೊಬ್ಬ ನಿ
ಮೋಹನ ಮಹಿಕ್ಕಾಗಿ ಕಾಂಕ್ಷೆಯೊ
ತ್ತಿದೆ ನಮ್ಮ ದೇಶವಾದೀ ಭರತಖಂ
ಈ ನಿಮಾರದಲ್ಲಿ ಎಂದಿಗೂ ಹಿಂದೆ
ರಲ್ಲಿ ಅವರ್ಷಯೂ ಪಂಜಾನದಿಗ
ಪವಿತ್ರವಾಗಿ, ಗಂಡುಭೂಮಿಯಾಗಿ
ಸಂಬಿ ದೇಶವು ವೀರ ಪುತ್ರರ ಜ
ನ್ಮಕ್ಕೆ ಮನರಾಗಿದ ಇಂದು ದೇಶದ
ಜ್ವಲಂತಾಸ್ಫೂರ್ತಿಸೂತ್ರಧಾರಿಗಳಾದ ತಂದೆ
ಮಗ ವಿಶ್ವವಿದ್ಯಲ್ಲಿ ಜನ್ಮ ಈಗಿನ
ತ ದ್ಧಿ ನಡೆಯುತ್ತಿರುವ ಬಾಜಕಾರಣ
ವ್ಯವಹಾ ಬಿಜಾಂಕುರದಲ್ಲಿಯೇ ದೇಶ
ತ್ತು ಜನಗಳಂದ, ಮೊದಲಾಗಿ ಎಲ್ಲರು
ಾಸ್ಪದ ಮೊದಲಾಗಿ ನಾನಾ ಕಷ್ಟ
ಸಲೆಗಳನ್ನೆಲ ಭವಿಸಿ ದೇಶಮಾತೆಯ
ಸಮನೋಭೀಷ್ಟಾಗಿ ಪ್ರತಿಫಲಾಪೇಕ್ಷೆ
ಾಗಿ ಪ್ರತಿಫಲಾಪೇಕ್ಷೆಯಲ್ಲಿದೆ ದೇಶ
ಯೇ ಉಸಿರೆಯೆಂದು ನಿರಂತರವೂ
ತಿಸಿ, ಪರಿಸಿ, ಏಂಬಿಸಿ, ಶ್ರಮಿಸಿ, ಉಪ
ಸ್ಥಿತಾನು ಬಡುಕಿಪ್ಪ ತೀರವತ್ತಮೂ
ವಾಗಳೂ ತನ್ನ ದೇಶದ ಸ್ವಾತಂತ್ರ್ಯ
ಸ್ಥಿನನ್ನು ಆಳೆಯಲು ಒಂದ ಕಮಾ
ನ್ನು ಸಂಗೂಡಿಸದಿರುವಂತೆ ಹೋ
ಕೂನೆಗೆ ಸಪ್ತ ಗೃಹಗಳ ಕ್ರೂರವೈ
ಸೆರಿಯಾಗಿ, ತನ್ನ ತಾಯಿನಳೆಗಳ
ಸ್ಥಾಪಿಸಲಾರತಮಾಂಯ ವಾದ ತಲದ
ಸ್ಥಿತಿಸ್ಥಾಪಿತವಾಗಿ ಅರಿಸಿ, ಈಗ್ಗೆ
ಸುಮಾರು ವರ್ಷಗಳ್ಳಿ ನಮ್ಮ ದುರ್ದೈವ
ದೆ ಕಣ್ಮರೆಯಾಯ ಭಾರತಕೀರ್ತಿಸೂ
ನು ದೇಶಸ್ವಾತಂತ್ರ್ಯಾಗ್ನಿಣ ಲಾಲಾಲಜಪ
ಾಯರಿಗೆ ಜನಿಸಿದಂಥ ರಾವು
ಸ್ಥಿ ಬಾನಿಗೆಲಂಬ ವನ್ನು ಪಡೆಸಲಳ

ಈ ಸತ್ಯರತಿಂದ ಶರೀರವನ್ನು ಅವರು
ಸೆಟ್ಟಿಯಿಂದ ತ್ಯಜಿಸಿಯಾದರೂ, ಪ್ರ
ಸ್ಥಿರೇಯರ ಗುಂಪಿಗೆ ಸೇರಿ, ಜನ್ಮಸು
ಗಳಾದ ಚಿರಂಜೀವಿಗಳಾಗಿದ್ದಾರೆ

ಆ ದೇಶಭಕ್ತರ ದೇಶವೇವ ನ್ನೆ ಎ
ಸ್ಥು ಕೊಡಾಡಿದರೂ ತೀರದು, ನಿಸ್ವಾರ್ಥ
ಸೆವೆಯನ್ನು ಆವರಲ್ಲಿ ಕಂಡಿತಂಾ
ಹುತ್ತಿದ್ದಿತು

ತನ್ನ ಗತ ಜೀವನವನ್ನು ಗಾಂ ದಿಸಿ
ಕೊಂಡು ಪ್ರಪಂಚಕ್ಕೆ ಆದರ್ಶ
ವಾಗಬೇಕೆಂಬ ಇವರ ಮಹತ್ತಾ ಕಾಂಕ್ಷ
ಯನ್ನು ಜಗತ್ತು ಲೇಖ್ಯಿಯಿಂದಲೇ ತಿಳಿಯ
ಬಹುದು. ಅದನ್ನು ಈ ಕೆಳಗ ಕಾಣಿ
ಸಿದೆ —

ಭಾರತಕ್ಕೆ ಬೇಕಾಗಿರುವುದೇನು?

೧ ಆಜ್ಞೆನಾಡಿಸುವದನ್ನು ಬಿಟ್ಟು
ಸ್ಥಿತಿಯನ್ನು ತೋರ್ಪಡಿಸಿ ಸಂಕ್ಷೀಣ
ಕೊಡುವ ಕಾಮತಂದೆಗಳು

೨. ಯಾವು ಬೇಳೆದ್ದನ್ನೇ ವೇದವಾಕ್ಯ
ವೆಂದು ನಂಬುವಂತೆ ಪಾರಕರಿಸದೆ, ಯು
ಕ್ತಾಯುಕ್ತ ಪರೀಷ್ಣಾನವನ್ನು ಮಕ್ಕಳಿಗೆ
ಬೋಧಿಸುವ ಉಪಾಧ್ಯಾಯರು

೩ ಸರಿಯಾದ ಮಾರ್ಗದರ್ಶಕರಾದ
ನಾಯಕರು.

೪. ಅಭಿಪ್ರಾಯಭಿನ್ನತೆಗಾಗಿ ಪರ
ಸ್ಪರ ಕತ್ತಾಡದೆ, ನಿಜವಾದ ಮುಕ್ತ
ಜನೋಪಕಾರಿಣಿದ ಕಾರ್ಯಗಳಿಗೆ ಧಾರಾಳ
ವಾಗಿ ಸಮಾಯೋಷಾತುವ ಸ್ನೇಹಿತರು

೫. ಸಿದ್ಧಾಂತಗಳನ್ನು ಬೋಧಿಸುವ
ಬೋಧಕರು

೬ ಕುರಿಗಳಂತೆ ತಮ್ಮನ್ನು ಹಿಂಬಾ
ಲಿಸಿದೆಂದು ಕೂಡದ ಮತಮೌಢ್ಯರು

೭ ಹೇಡಿಯಿರಿ ರಕ್ತವನ್ನು ಹೀರುವ,
ಮಾನವತೆಯನ್ನು ತಳಿಸುವ ಪ್ರೇತಸಿ,
ಸಂಸಾರವನ್ನು ಸ್ವರ್ಗವಾಗಿಸುವಂತೆ ಇಡ
ಲು ಯತ್ನಿಸುವ ಗಂಡಂದಿರು.

೮. ಗಂಡಂದಿರಿಂದ ಗುಲಾಮರಂತೆ
ಕಾಣಿಸಿಕೊಂಡಿರುವವರ್ಕಾಗಲೀ, ಇಲ್ಲ
ದು ತಿಳಿದುಕೊಂಡಿರುವರ್ಕಾಗಲೀ ಎಂದಿ
ಗಾ ಮಕ್ಕಳನ್ನು ಹೆಬ್ಬುವ ಕೆಸಲ ಯತ್ನ
ದಂತಿರುವವರ್ಕಾಗಲೀ ತಾವೇ ತಪಕಾರ
ಮಾಡಿಕೊಳ್ಳಬೇಕಾದ್ದು ಸಹಜವಾದ ಪ್ರೀತಿ
ಮತ್ತು ಭಕ್ತಿಯಿಂದ ರತಿ ಸೇವೆ ಮಾಡು
ತ್ತಾ, ಕಷ್ಟಸುಖಗಳಿಗೆ ಭಾಗಿನಿಯಾಗಿ
ಜನ್ಮಸಾಳ್ಳು ಹೊಂದುವ ಕಂತೆಯರು

೯. ಅತ್ಯಲ್ಪ ಫಲಕ್ಕೆ ಕೃಪ್ತಿಹೊಂದ
ದೆ, ಪೂರ್ಣ ತಿರಳನ ಗುರಿಯನ್ನೇ ಸದಾ
ಯೋಚಿಸತಕ್ಕ ದೇಶಭಿವಸಿಗಳು

೧೦ ಮನುಷ್ಯತ್ವ, ಜನಾಂಗ ಗೌ
ವ, ಆತ್ಮಗೌರವ, ಸೇವಾಕಾಂಕ್ಷೆ, ಕರ್ತ
ವಸಿಷ್ಠತೆ, ಪರಿಶುದ್ಧ ಜೀವನ, ಧೀರಾಳ
ಬುದ್ಧಿ, ನ್ಯಾಯಮಾರ್ಗ, ವಶೋಪಕಾರ,
ಇವುಗಳಿಗಾಗಿಯೇ ಮೂರ್ತೀಭವಿಸಿರುವಂ
ತಹ ತರುಣರು.

೧೧. ತಮ್ಮ ಹಣದ ಗಂಟು ಒಲ
ವಾಗುವವನ್ನೇ ನಿರೀಕ್ಷಿಸದೆ, ತಮ್ಮಂತೆ
ಯೇ ರೈತರೂ ಮಾನವ್ಯವರ್ಗಕ್ಕೆ ಸೇರಿದ
ವರೆಂಬ ಭಾವನೆಯುಳ್ಳ ಉದಾರಿಗಳಾ
ಶ್ರೀಮಂತರು

೧೨. ಬಿರುದ ಬಾವಲಿ, ಸಾರಸ, ಇಲ್ಲ
ದೇ ಜಹಗೀರು ಒಬ್ಬರಿಗಿಂತಲೂ, ನಿಜ
ವಸ್ತುವೇ ನೀಲಿ ನಡೆಯುವ ಪ್ರಜಾ ಸೇವ
ಕರು

೧೩ ಜಾಳುವೇ ಇಲ್ಲದೆ ಸ್ವಜೀವರ್ಗ
ಕ್ಕೆ ಪಡ್ತಾವಕಾರಿಗಳಾದ ಸೇವಕ್ಕಾಗಿ
ಯೆ ಪ್ರಾಣಿಸಂತೆರು

೧೪ ಜನರಿಗೆ ಕೋಪ್ಯಾಪೇಕ್ಷೆಗಳನ್ನು
ಬಿಂಬಿಸಿ ಎನಧ್ಯೆಗಳನ್ನುಂಟುಮಾ
ಪ ರೀತಿಗೆ ಎಳೆಯದೆ, ನಿಜವಾದ ಮತ್ತು
ಸತ್ಕಾರ್ಯಕೀರ್ತಿಲಾಭಗಳುಂಟಾ ಎಳಸುವ
ಉದ್ಯಾಪಕರು.

೧೫ ವೈಕ್ತಿದ್ವೇಷಗಳಂತಾ ಕೀಳು
ಚಾರಗಳಿಗೆ ಎಡೆಯೊಡದೆ, ಗಾಳಿಗೆ ದೋ
ಗ್ಯವಾದ ವಿಚಾರಗಳನ್ನೇ ಕೊರಿತು ಬರೆ
ಯುವ ಪತ್ರಿಕೋದ್ಯೋಗಿಗಳು.

೧೬. ತಮ್ಮ ಇಚ್ಛೆಯಂತೆ ಬೇ
ಸಮಾಚಾರಗಳನ್ನು ಸಾತ್ಕೃಷ್ಟವೇ ಸತ್ಯ
ವಾ ವೃತ್ತಾಂತವನ್ನೇ ತಿಳಿಸಿದ ಬಾತ್ರಿ
ದಾರರು.

೧೭ ತಮ್ಮ ರಕ್ತ ಕ್ಷೀರ ಮತ್ತು
ಸ್ವಾರ್ಥತೆಗಿಂತಲೂ ಮಿಗಿ ಜಗಗಳ
ಮೇಲ್ಮೆ, ಮುಕ್ತ ಹಿತಕ್ಕಾಗಿಯೇ ಮಡಿ
ಯುವ ಕಾರ್ಯಾನಿರ್ವಾಹಕರು

೧೮ ಪ್ರಜೆಗಳ ರಾಜಭಕ್ತಿಯನ್ನು
ಸುಸೂತ್ರವಾ ನಡೆಸಿಕೊಳ್ಳಲು ಪ್ರೌ
ತ್ಸಾಹಿಸಿಕೊಡುವ ರಾಜರು.

೧೯ ಮೊತ್ತಸ್ಥಿಕತತ್ವ ಕೀರ್ತಿ
ರ್ಗಳಿಗಿಂತಲೂ ನಾಮ, ಧರ್ಮ ಮತ್ತ
ತ್ವವಾದಿತನಗಳಿಗೆ ಹೆಚ್ಚಾಗಿ ಯೋಚಿಸುವ
ಅಧಿಕಾರಿಗಳು

೨೦ ಇಂಗ್ಲೆಂಡ್ ದೇಶಕ್ಕಿಂತಲೂ
ಹಿಂದೂಸ್ಥಾನವನ್ನು ಹೆಚ್ಚಾಗಿ ಲಕ್ಷಿಸುವ
ರಾಜಪ್ರತಿನಿಧಿಗಳು.

ಇವಾ ನಿಜಾರ್ಥ ಎಳಿಪ್ರಾಯಗ ಸ್ಥಿ
ಟ್ಟು ಕಾಂಡಿದ್ದ ಜನರನ್ನು ಮಾತ್ರ
ಮತ್ತು ಕಾರ್ಯಗಳನ್ನೆ ಖಂಡ್ರಿ ಹೊಂದಿಕೆ
ಯಿಂದಿದ್ದು ಮನುಷ್ಯ ಜೀವಿತದಲ್ಲಿ ತನ್ನ
ಕಾರ್ಯವನ್ನು ಪೂರ್ಣಗೊಳಿಸಿ, ದೇಶ
ಸ್ವಾತಂತ್ರ್ಯಕ್ಕೆ ತೆರೆಯ ಅಂತ್ಯಜಿಯವರೆಗೂ
ನಾವು ಇಂದು ಭಕ್ತಿಯಿಂದ ಸ್ಮರಿಸೋಣ

— —

ಶ್ರೀ ಸುಭಾಷ್ ಜೋಸೆಫ್ ಇಂಗ್ಲೆಂಡಿಗೆ

ಶ್ರೀ ಸುಭಾಷ್ ಜೋಸೆಫ್, ಈ ನಾಡಿ
ನಾಗರಿಕರಲ್ಲಿ ಇಂಗ್ಲೆಂಡಿಗೆ ಹೋಗುವರೆಂದು
ತಿಳಿಯುವುದಿದೆ ಸುಭಾಷರ ಈ ಭೇಟಿ
ಜ. ಆಕ್ಸೋಗ್ಯಲಾಭವನ್ನು ಪಡೆಯುವದ
ಕ್ಕಾಗಿ

ಶ್ರೀ ಸುಭಾಷರು ಇಂಗ್ಲೆಂಡಿನಲ್ಲಿ ಸು
ಮಾರು ಒಂದುವರೆ ತಿಂಗಳರವರೆಗಿರುವುದು

ಕಸವನ್ನು ಸುಟ್ಟು ಮೋಟಾರು ನಡೆಸುವುದು.

— —

ಮೋಟಗಳನ್ನು ಕೊಯ್ಯುವಾಗ ಮೊದಿ
ದೆ ಸಿಕವ ಪುಡಿ ಪಾಕ ಗಟ್ಟಿ ಆದ
ರಿಂದ ಬಹಳ ಸ್ಥಾನವಾಂದೆ. ವೇಗವಾ
ಗಿಸಲು ಪಾರ್ಟಿಲ್ ಕೆಲವು ಕಾರ್ಖಾ
ನೆಯವರು ಹೊಸ ಮಾದರಿಯ ಸೆ
ಮೈಲ್ ಎಂಜಿನ ನಡಾಯಿಂದೂ
ಆವಸ್ಯ ಬಿದ್ದೇಕೆಂದೂ. ಇವರು ಉಪ್ಪಿ
ಸ್ಥಿ ಈಗಾಗಲೇ ಬಸ್ಸುಗಳಲ್ಲಿ ಮೀನು
ಸ್ಥಿಗಳನ್ನು, ಗ್ಯಾಸನ್ನು, ಹಾಕಿ, ಸುಟ್ಟು
ಇಂಜಿನ್ ನಡೆಸುವ ಮೋಟಾರು ಕಂಪ
ಗಳ್ಳು ತಯಾರುಮಾಡಿರುತ್ತಾರೆ ಬಿಟ್ಟಿದ
ಚರಂಡಿಗಳ ಕೊಳಕ್ಕನ್ನೂ. ಬಿಸ್ಕೆಗ
ಳಂತಲೂ, ಹೊಲಯುವ ಗ್ಯಾಸನ್ನು,
ಮೋಟಾರು ಇಂಜಿನ್‌ಗಳಿಗೆ ಬಿಟ್ಟಿಯಾಗಿ
ಸುವ ಕೋಷ್ಠಗಳನ್ನು ನಡೆಯುತ್ತಿವೆ. ಜರ್ಮನಿ
ಯಲ್ಲಿ ಅನೇಕ ಕಡೆ, ಇಂತಹ ಗ್ಯಾಸನ್ನು
ಶೇಖರಿಸಿಟ್ಟುಕೊಂಡಿರುತ್ತಾರೆ ಈ ಗ್ಯಾಸ
ನ್ನು ಪಾಕ ಮೋಟಾರು ನಡೆಸುವುದರಿಂದ,
ಗಂಟೆಯೊಂದಕ್ಕೆ ೬೦ ಮೈಲಿಗಳ ವೇಗವಂ
ತೆ ಮೋಟಾರುಗಳನ್ನು ಓಡಿಸಬಹುದೆಂತೆ

ಸಂಗೀತದಿಂದ ಕಳ್ಳವಾ ಕಿದುರಿ ಪಡ್ಡೆಯಾಯಿತು

ಬ್ಯೂಡಾಪೆಸ್ಟಿನಲ್ಲಿ ಬ್ಯಾಂಡ್ ಮಂಟಪ
ವೊಂದರಲ್ಲಿ ಸಂಗೀತ ನಡೆಯುತ್ತಿರುವಾಗ
ಗಾಡಿಗೆ ಕಟ್ಟಿದ ಕುದುರೆಯೊಂದು ಸಂಗೀ
ತವನ್ನು ಕೇಳಿ ಕಣ್ಣುಮುಚ್ಚಿಕೊಂಡು ನಿಲ್ಲುತ್ತಿತು ಈ
ವಿಚಿತ್ರವನ್ನು ನೋಡಲು ಜನರು ಗುಂಪು
ಸೇರಿದರು ಈ ಸಮಯಕ್ಕೆ ಪೋಲೀಸರು
ಬಂದರೆ ಈ ವಸ್ತುವೇ ಪೋಲೀಸರಿಗೆ ಸಕ್ಕ
ಸ ಕೊಟ್ಟಿಸಿಯನುದು ತಮ್ಮ ಕುದುರೆ ಕಳ್ಳ
ರಾಗಿದೆಯೆಂದು ತಿಳಿದಿದ್ದರು. ಕಡಿವರು
ಪತ್ತೆಯಾಗಿ ಸ್ಥಾನ ಕಾನೆಸ್ಟಿಗೆ ಎಂಡಿಸ್ಟ್ಯು
ತಿತ್ತಾ ಕುದುರೆಯನ್ನು ಕದ್ದ ಇವಿಕಾರ
ಪಸ್ಥಿಗೆ ಜೈಲುವಾಸ ಸ್ವಾಪ್ತವಂಮಿತು.

ವಿದ್ಯುತ್ ತಂತಿಯ ಬೇಲಿ

ಅಮೇರಿಕಾವು ವೈಜ್ಞಾನಿಕ ಸಾಧನೋಕರ
ಯ ಹೋಗಿರುವುದಲ್ಲಿ ಮುಂದುವರಿದ ದೇಶ
ವು. ಪ್ರಾಣಿಗಳಿಗಾಗಿ, ತೋಟಗಳಿಗಾಗಿ, ಹೊ
ಗದ್ದುಗಳಿಗಾಗಿ ಬೇಲಿಗಳನ್ನು ಅ ಎವುತಕ್ಕೆ
ವಿದ್ಯುತ್ ತಂತಿಗಳನ್ನು ಉಪಯೋಗಿಸು
ತ್ತಾರೆ. ವ್ಯಗಳೂ, ಜನಕರೆಯಿಗಾಗಿ ವೈ
ರನ್ನು ಮಾಯಮಾತುವುದು. ತಪ್ಪಿಸುವರು.
ಅವಾಯಕರವಾದಷ್ಟು ವಕ್ಷುಗೆ ಕಾಣಿವ
ನ್ನು ಬಿಡ ಸೂಕ್ಷ್ಮ ಪ್ರಾಣಿಗಳನ್ನು ತಿಂದಿಯು
ವಷ್ಟು ಮಟ್ಟಿಗೆ ಪೊಟ್ಟಿಗೆಯನ್ನು ಬಾಷಿ
ವನ್ನು ಬಿಡುತ್ತಾರೆ.

ಹಿಂಸಾ ಪ್ರಾಚ್ಯ

ಶ್ರೀಮನ್ಮಹಾರಾಜರವರು ವಿಕೆಂಬರು
೨೦ ರಲ್ಲಿ ಹಿಂಸಾ ವಿಸ್ಮೃತ್ಯರ್ಥ ಪ್ರತಿ
ಕಾರ್ಯಾರಂಭದಿಂದ ರಂಗಾಸ್ವಾಮಿಯಂಗಾ
ನೆನೆಪಿಗಾಗಿವೆಂದು ತಿ ಸಿ. ಬಂಎಸ

ಸಾ ಧ್ವ
೨೨—೧೧—೩೭ ನೇ ಸೋಮವಾರ

ಪ್ರಜಾ ಜಾಗೃತಿ.

ನಮ್ಮ ಸಂಸ್ಥಾನದ ಜನರಲ್ಲಿ ಈಗ ಉಂಟಾಗಿರುವ ಜಾಗೃತಿಯು ಅತ್ಯಂತ ಆದ್ಯತೆಯ ವಿಷಯವಾಗಿದೆ. ಮೈಸೂರು ಕೇವಲ ಧಣಿಕರು ಬೇಕಾಬಿಟ್ಟಿ ಮೊತ್ತ ತೊರೆದಂಥ ಸ್ವತ್ತಲ್ಲ. ಮೈಸೂರಿನ ಜನರು ಕೇಳಲು ಎಲಂಕಾರಪ್ರಿಯರೆಂದೂ, ಸ್ವಭಾವ ಸಾಧಸಗಳಲ್ಲಿ ಮಂಜಾಗಿದ್ದಾರೆಂದೂ ಕೆಲವು ಹೊರಗಿನ ಜನರು ಆಡಿಕೊಳ್ಳುತ್ತಿದ್ದರು ಲಪಸ್ಟೆಲ್ಲಾ ಸುಳ್ಳು ಮಾಡುವ ಕಾಲವು ಬಂದಿದೆ. ಮೈಸೂರಿನ ಸಾಹುಕಾರು, ಮೈಸೂರಿನ ಶ್ರೀಮಂತರು, ಮೈಸೂರಿನ ಜಿಲ್ಲಾಧಿಕಾರಿಗಳು ಇವೆಲ್ಲಾ ಜನರ ಕಣ್ಣಿಗೆ ಪ್ರಮುಖವಾಗಿ ಬೀಳುತ್ತಿದ್ದವು. ಪ್ರಜಾಸ್ವಾತಂತ್ರ್ಯಸಾಧನೆಯಲ್ಲಿಯೂ ಮೈಸೂರಿನವರು ಇತರರಿಗಿಂತ ಕಡಿಮೆ ಜ್ಞಾನವೆಂಬುದನ್ನು ತೋರ್ಪಡಿಸಲು ಅವಕಾಶವಿಲ್ಲಿಲ್ಲ. ಕಾರ್ಯಕಾರಣ ಸಂಯೋಗವಿಂದ ಈಗ ಅಂತಹ ಪ್ರಸಂಗವು ಒದಗಿದೆ. ದೇಶ ಹಿತಕ್ಕಾಗಿ ರಾಜ, ಮಂತ್ರಿಜನರ ಹಕ್ಕುಬಾಧ್ಯತೆಗಳನ್ನು ಕಾಪಾಡುವುದಕ್ಕಾಗಿಯೂ ಮೈಸೂರಿನವೂ ಇತರರಂತೆ ಸರ್ವಸ್ವವನ್ನೂ ತ್ಯಾಗ ಮಾಡಲು ಸಿದ್ಧರಾಗಿರುವರೆಂಬುದನ್ನು ಈಗಾಗಲೇ ಪ್ರಪಂಚಕ್ಕೆ ಸಾರಿದ್ದಾರೆ. ಇದು ನಮ್ಮ ದೇಶದ ಸಮಸ್ತರಿಗೂ ಹೆಮ್ಮೆ ಪಡಲು ತಕ್ಕ ವಿಷಯ

ಇನ್ನಿಲ್ಲದ ಹಳ್ಳಿಕಳ್ಳಿಗಳ ಜನರು ಅಸಕ್ತರಾಗಿದ್ದರೆಂದೂ ಯೋಚಾನುಭವವಿಲ್ಲದವರೆಂದೂ, ರಾಜಕೀಯ ವಿಷಯದಲ್ಲಿ ಆಭರುಚಿಯೇ ಇಲ್ಲವೆಂದೂ ಆಸಹ್ಯಪಟ್ಟಿದ್ದರು. ಆದರೆ ಒಳಿಗೆ ಒಂದೆರಡು ತಿಂಗಳಿಂದ ದೇಶದಲ್ಲೆಲ್ಲಾ ನಡೆಯುತ್ತಿರುವ ಸಭೆಗಳಿಂದಲೂ, ಪ್ರದರ್ಶನಗಳಿಂದಲೂ, ಸಮಾಜಭೂತಿಗಳಿಂದಲೂ ನಮ್ಮ ಗ್ರಾಮಾಂತರದ ಜನರಿಗೆಲ್ಲಾ ಎಷ್ಟೊಮಟ್ಟಿಗೆ ಸಾರ್ವಜನಿಕ ಜೀವನದಲ್ಲಿ ಬಾಗಿಗರಾಗುತ್ತಿರುವರೆಂಬುದು. ನೇದ್ಯವಾಗುವುದು. ಹೊಸ್ತಿ ನಡದೆ ಹರತಾಳವಂತೂ ಎಲ್ಲರ ಕಣ್ಣನ್ನೂ ತೆರೆದಿದೆ ಯಾವ ವಿಧವಾದ ಪ್ರೇರಣೆಯೂ ಇಲ್ಲದೆ ಅತ್ಯಪಂತೋಷದಿಂದ ದೇಶದ ಮೂಲೆ ಮೂಲೆಗಳಲ್ಲಿಯೂ ಹರತಾಳವನ್ನು ಆಚರಿಸಿ, ಸಭೆಗಳನ್ನು ನಡೆಸಿ ದೇಶಭಕ್ತರಿಗೆ ಸನ್ಮಾನಪೂರ್ವಕವಾಗಿ ಸಲ್ಲಿಸಿರುವರು. ಇವರಿಂದ ನಮ್ಮ ಸಂಸ್ಥಾನದಲ್ಲಿ ಉಂಟಾಗಿರುವ ಜನಜಾಗೃತಿಯು ಎಲ್ಲರಿಗೂ ವಿಶದವಾಗಿರುತ್ತದೆ ಸರಕಾರದವರೂ ಸಹ ಇಂತಹ ಸಮಯೋಚಿತ ಸತ್ಯವನ್ನು ಕಂಡು ಆದ್ಯರ್ಯಪಡುವಂತಿದೆ

ಈ ಹೊಸ ಸ್ಫೂರ್ತಿಯನ್ನು ನಮ್ಮ ಅಧಿಕಾರಿಗಳು ಸಂಪೂರ್ಣವಾಗಿ ಮನಸ್ಸಿಗೆ ತಂದುಕೊಳ್ಳಬೇಕು. ಜನರ ಇಂಗಿತಗಳನ್ನು ತಿಳಿದುಕೊಳ್ಳಬೇಕು. ಕಾಲವನ್ನೂ, ಸಮಯ ಸನ್ನಿವೇಶವನ್ನೂ ಅನುಸರಿಸಿ ನಡೆಯಬೇಕು ಕಾಂಗ್ರೆಸ್ಸಿನ ಮುಖಂಡರೊಡನೆ ಕೂಡಿ ದೇಶಹಿತಸಾಧನೆಗೆ ಅವಶ್ಯಕವಾದ ಕಾರ್ಯಗಳನ್ನು ಅಪಲಂಬಿಸಬೇಕು ಹೀಗೆ ಮಾಡಿದರೆ ತೀಕ್ಷ್ಣಬುದ್ಧಿಯೆಂ' ಶಾಂತಿಸಮಾಧಾನಗಳು ನೆಲೆಸಿ ನಮ್ಮ ದೇಶವು ಪ್ರಗತಿ ಮಾರ್ಗದಲ್ಲಿ ಆಡಿಯಿಡುವುದು.

ದೇಶಭಕ್ತರ ದಿನಾಚರಣೆ

ಎಲ್ಲೆಲ್ಲೂ ಹರತಾಳ ಬಹಿರಂಗ ಸಭೆಗಳು

ಶ್ರೀಗುಲಾಡಿ ಕೆ ವಿ ಭಾಷ್ಯಂ. ಎಮ್ಮಾ ರೆಡ್ಡಿ, ತಗಡೂರು ರಾಮೇಂದ್ರರಾವ್, ವೀರ ಕೇಸರಿ ಸೀತಾರಾಮಯ್ಯ ಮತ್ತು ಟಿ ಸಿದ್ದಲಿಂಗೆಯ್ಯನವರಿಗೆ ಕಾರಾಗೃಹವಾಗಿರುವ ಪ್ರಯುಕ್ತ ಕಳೆದ ಗಳಿ ನೇ ತಾರೀಖು ಭಾನುವಾರ ಸಂಸ್ಥಾನದೆಲ್ಲೆಲ್ಲಾ ಹರತಾಳವು ಆಚರಿಸಲ್ಪಟ್ಟಿತು. ಕೆಲವು ಕಡೆಗಳಲ್ಲಿ ಸಾನಾಪನಾದಳು ಆಡ್ಡಿ ಮುಂತಾದವುಗಳು ಒಂದವು

ಬೆಂಗಳೂರಿನಲ್ಲಿ ವರ್ತಕರೂನೇಕರು ತಮ್ಮ ಅಂಗಡಿಗಳನ್ನು ಮುಚ್ಚಿದ್ದರು. ಹೋಟೆಲುಗಳು ಸಹಾ ಮುಚ್ಚಲ್ಪಟ್ಟಿದ್ದವು ಬೆಂಗಳೂರು ವಿದ್ಯಾರ್ಥಿಗಳಿಗೆ ನೇ ಸೆಕ್ಷನ್ ಜಾರಿಯಲ್ಲಿದ್ದ ಪ್ರಯುಕ್ತ ಸಾರ್ವಜನಿಕ ಸಭೆ ನಡೆಯಲಿಲ್ಲ ಮೈಸೂರಿನಲ್ಲಿಯೂ ಒಳಗೆ ಶಾಂತಿಯುತವಾಗಿ ಹರತಾಳವು ಆಚರಿಸಲ್ಪಟ್ಟಿತು. ಜಾರಿ ಬಲಾತ್ಕಾರವೂ ಇಲ್ಲವಿದೆ ವರ್ತಕರು ತಮ್ಮ ತಮ್ಮ ಅಂಗಡಿಗಳನ್ನು ಮುಚ್ಚಿದ್ದರು. ಆನಿನ ಸಾಯಂಕಾಲ ಸುಬ್ರಾಯನ ಕೆರೆ ಮೈದಾನದಲ್ಲಿ ಮಾ|| ರಂಗರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ನಡೆಯಿತು. ಸುಮಾರು ೫೦೦೦ ಜನರು ಸೇರಿದ್ದರು. ಶ್ರೀ|| ಗೌರಿ ನಿ ಲಿಂಗಸ್ವಾಮ್ಯ, ಶಾಲಿಹೆಳ್ಳಿ ಸೀತಾರಾಮಯ್ಯ, ಎಂ ರಂಗರಾಮಯ್ಯ ಹೆಚ್. ನಿ ಸಾಸ್ವಾ, ರಂಗರಾಮಯ್ಯ ಮುತ್ತು ಎಂ. ಎ. ಜೋಯಿಸರು ಭಾಷಣ ಮಾಡಿದರು. ಎಲ್ಲರೂ ದೇಶಭಕ್ತರಿಗೆ ಕಷ್ಟ ಅಪಮಾನಗಳಿಗಳನ್ನು ಪಟ್ಟಿಸಿ, ಕಾಂಗ್ರೆಸ್ಸಿನ ಧ್ಯೇಯ ಮತ್ತು ಜನಾಬ್ಜಾರಿ ಸರ್ಕಾರದ ಅನಶ್ಯಕತೆ ಮುಂತಾದುವುಗಳನ್ನು ತಿಳಿಸಿದರು.

ಕರುನಾಡಿನಲ್ಲಿ ನರಸೀಪುರವಲ್ಲಿಯೂ ಒಳಗೆ ಯಶಸ್ವಿಯಾಗಿ ನಡೆಯಿತು. ಅಲ್ಲಿ ಹೋಟೆಲುಗಳೂ, ಹೆಂಡದಂಗಡಿ, ಪಾಂಸವಂಗಡಿ ಮುಂತಾದುವುಗಳೆಲ್ಲವೂ ಮುಚ್ಚಲ್ಪಟ್ಟು ಗಾಂಧಿ ಸೈದಾನದಲ್ಲಿ ಸಾರ್ವಜನಿಕ ಸಭೆಯೂ ನಡೆಯಿತು

ಈ ರೀತಿ ಶಾಂತಿಯುತವಾದ ಹರತಾಳವು ಎಂದೆಂದೂ ನಡೆದಿರಲಿಲ್ಲ. ಇವೆಂದ ಜನರಿಗೆ ಕಾಂಗ್ರೆಸ್ಸಿನಲ್ಲಿರುವ ಭಕ್ತಿವಿಶ್ವಾಸಗಳು ಬಳಕೆ ಹೆನ್ನಾಗಿ ತೋರಿಬಿಮತ್ತವೆ

ಈ ಹರತಾಳದ ಸಂಪೂರ್ಣ ಪರಿಣಾಮವು ಸರ್ಕಾರವರಿಗೆ ಮನಸ್ಸಿನ ಮೇಲೆ ಆಗಿರುವುದೆಂದು ನೆಂಬುತ್ತೇನೆ.

ಈಗ ಮಾಡಬೇಕಾದುದು?

ಲೇಖಕ.—ಹುಕೆ.

ಶಾಂತರೀತಿಯಿಂದ ನಡೆಯಿರಿ ಎಂದು ಸಾರಿಗಟ್ಟಿಲೆಯ ಹಸ್ತ ಪತ್ರಿಕೆಗಳನ್ನು ಹಂಚುವ ಕ.ಲಬಿ-ಳ್ಳ ಸರ್ಕಾರವನ್ನು ನಾಂದಿಸುತ್ತಾ ಕುಳಿತುಕೊಳ್ಳುವ ಕಾಲವೂ ಇದಲ್ಲ. ಈಗಜ್ಜೆಲಿಗೆ ಹೋಗಿರುವಷ್ಟು ಮಂದಿಗಳ ತ್ಯಾಗವೇ ಸಾಕು ಮೈಸೂರು ಬಾರ್ಡೋಲಿ ಅಥವಾ ಸಿದ್ಧಾಪುರಗಳಾಗಬೇಕಾದುದಿಲ್ಲ ಮುಂದಾಳುಗಳೇಂಬವರು ಪ್ರಜೆಗಳ ಒಂದೊಂದು ಕಾಸೂ ಬೆಲೆಯುಳ್ಳದೆಂಬುದನ್ನು ಸರ್ಕಾರಕ್ಕೆ ತಿಳಿಸಬೇಕಾಗಿದೆ ಇಂದಿನ ತ್ಯಾಗವೀರರು ದೇಶ ಹಿತಕ್ಕಾಗಿ ಕಷ್ಟಕ್ಕೆ ಗುರಿಯಾದವರೆಂಬುದನ್ನು ಮನಗಾಣಬೇಕಾಗಿದೆ ಕಾಂಗ್ರೆಸ್ಸು ಪಕ್ಷವಾದರೂ ಆಳುವ ಮಿನಿಸ್ಟಾಮಂಡಲದ ಆಶ್ರಯದಲ್ಲಿಯೇ, ಅವರ ಅಧೀನದಲ್ಲಿಯೇ, ಅವರ ಸರ್ವಾಧಿಕಾರದಲ್ಲಿಯೇ ಜವಾಬ್ದಾರಿಯ ಸರ್ಕಾರವನ್ನು ಕೇಳುತ್ತಿದೆ

ಸರ್ ಕೆ. ಪಿ ಪುಟ್ಟಣ್ಣಶೆಟ್ಟರಾಗಲಿ, ಮೈಸೂರಿನ ಶ್ರೀಗಿಎ ಸುಬ್ರಹ್ಮಣ್ಯಯ್ಯಂಗಾರಾಗಲೀ ಕಾಂಗ್ರೆಸ್ಸಿನವರಿಗೂ, ಸರ್ಕಾರಕ್ಕೂ, ಇಬ್ಬರಿಗೂ ದೇಶದ ಸಂದೇಶವನ್ನು ತಿಳಿಸಲು ಅರ್ಹರು. ಈ ಮಹಶೀಯರುಗಳು ದೇಶವ ಎಂಟು ಚಿಕ್ಕಿಕ್ಕವುಗಳಂದಾಗಲೀ ಅಥವಾ ತಾಲ್ಲೂಕಿಗೆ ಒಬ್ಬರಂತಾಗಲೀ ಕರೆಸಿ, ದೇಶದ ಇಂದಿನ ಸಮಸ್ಯೆಗಳನ್ನು ಕೂಲಂಕುಷವಾಗಿ ಒಬ್ಬರಿಗೊಬ್ಬರು ತಿಳಿಸಲು ಅವರಿಗೆ ಅಭಿಪ್ರಾಯಗಳನ್ನು ಅಳವಡಿಸಲು ಮಹಾಸ್ವಾಮಿಯವರ ಮುಂದೆ ಇಡಬೇಕಾಗಿದೆ ಯಾರೂ ಕಾಂಗ್ರೆಸ್ಸಿನ ಮುಂದಾಳುಗಳ ತ್ಯಾಗವನ್ನು ತೃಣವಾಗಿನೆಸಿ ಅವರಿಗೆ ರಾಜನೀತಿಯನ್ನು ಉಪದೇಶಿಸಬೇಕಾಗಿಲ್ಲ ಸರ್ಕಾರವಾದರೂ ನಿರ್ವಹಣೆಯಿಂದ ತನ್ನ ತೀರಿಬಿದ್ದನ್ನು ಮಟ್ಟಿಗೆ ದೇಶೋನ್ನತಿಗಾಗಿ ಯತ್ನಿಸಿ ಸಾಧಿಸುತ್ತಿದೆ. ಆದರೆ ಅದರ ಯತ್ನವು ಇಂದಿನ ಸಮಸ್ಯೆಗಳಿಗೆ ಸಾಕಾದಷ್ಟಿಲ್ಲ. ಅದುಸಲುವಾಗಿಯೇ ಈ ಆಸಂತುಷ್ಟಿ.

ರೈತನ ಋಣಭಾರ, ಕಂದಾಯದ ಹೊರೆಗಳಿದ ಹೊರೆ, ವಿದ್ಯಾವಂತರ ನಿರುದ್ಯೋಗ, ಕುಡಿತ, ಇತ್ಯಾದಿ ಸಮಸ್ಯೆಗಳನ್ನು ಸರ್ಕಾರವು ಪರಿಶೀಲಿಸಿ, ಈಗ ಮಾಡಿರುವ ಸಹಾಯವು ತೀರಾ ಅಲ್ಪ. ಮುಖ್ಯ ಮುಖ್ಯವಾದ ಅಧಿಕಾರಿಗಳಲ್ಲಿ ಒಬ್ಬನೇ ಎಷ್ಟು ವರ್ಷಗಳಿಂದಲೂ ಕುಳಿತು ಮತ್ತೊ

ಜನ ಮತ್ತು ಧನ

ಕಾಂಗ್ರೆಸ್ಸಿನ ಪ್ರಚಾರ ಕಾರ್ಯ, ಎಲ್ಲಾ ಕಡೆಯಲ್ಲಿಯೂ ನಡೆಯುವುದಕ್ಕೆ ಯಂಸೇವಕರು ಬೇಕಾಗಿರುವರೆಂದು ಸೂರು ಡಿ' ಕಾಂಗ್ರೆಸ್ ಕಮಿಟಿಯ ಕ್ಷರಾದ ಶ್ರೀ|| ಎಸ್. ರಂಗರಾಮಯ್ಯರು ವಿನಂತಿಮಾಡಿದ್ದಾರೆ. ಮಕ್ಕಳ ಗ್ರೆಸ್ಸಿನ ಸಂದೇಶಗಳನ್ನು ಜನರಿಗೆ ವ್ಯವಕ್ಕಾಗಿಯೂ ಮತ್ತು ಕಾಂಗ್ರೆಸ್ಸಿನ ರ ಪ್ರಚಾರಕಾರ್ಯಗಳನ್ನು ನಡೆಸಕ್ಕಾಗಿಯೂ ಮಹಾಜನರು ಉದಾರವೆಸೆ ಸಹಾಯ ಮಾಡಬೇಕೆಂದು ಸ್ ಜೋಡಿನ ಅಧ್ಯಕ್ಷರಾದ ಶ್ರೀ ಚಂಗಲರಾಯ ರೆಡ್ಡಿಯವರು ಸ್ವಯಂಸೇವಕರಿಗೆ ಶಿಕ್ಷಣ ಕೊಡುವುದಕ್ಕೆ ಒಂದು ತಿಬಿರವನ್ನು ವರ್ಪಡಿಸುವುದಾಗಿ ತಿಳಿಸುವಂತೆ ಎಲ್ಲಾ ಕೆಲಸಗಳಿಗೂ ಜನ ಮತ್ತು ಸಹಾಯವು ಅತ್ಯವಶ್ಯಕ. ಸ್ವಯಂಕಲಂಗಲಿಚ್ಛಿಸುವವರು ಮೈಸೂರು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಎಸ್. ರಂಗರಾಮಯ್ಯನವರಿಗೆ ಕೋರಬೇಕಾಗಿ ಕೋರಲಾಗಿದೆ.

ಬ್ಬನ ವಿಳಿಗೆ ಅವಕಾಶವನ್ನೇ ಕೊಡುವುದೂ ತಲಾಣಿಗೆ ನಿರಾತಿಯನ್ನು ಮಾಡಿದೆ.

ಅಧಿಕಾರವು ಸೇವೆಯಾಗಿ ಪರಿಸಲ್ಲ, ವಿಲಾಸ ಸಾಧನವಾಗಿದೆ ವಾವ ಸಂಪಾದನೆ ನಿವೃತ್ತರಾದೂ ಕೈಗೆ ಅಧಿಕಾರಪ್ರಾಪ್ತಿ, ಬ್ಯಾಂಕಿನ ಜಮಾನು ಎಲ್ಲವೂ ಅಧಿಕಾರಿಗಳದೇ ದೆ. ಅಧಿಕಾರಿಗಳು ಜನರ ಸೇವಕ ಸಂಯಮನದಿಂದ ವರ್ತಿಸಬೇಕೆಂದು ಗ್ರೆಸ್ಸಿನವರು ಕಳಿಸುತ್ತಿದ್ದಾರೆ ಮೈಸೂರಾಗಲೀ, ಬೆಂಗಳೂರಿನವರಾ ದೇಶದ ಎಲ್ಲೆಡೆಗಳಿಂದಲೂ ಪ್ರತಿಗಳನ್ನು ಜರಪಾಡಿಕೊಂಡು, ದೇಶದ ಪ್ರಾಯವನ್ನು ತಿಳಿದು ಆಳುವ ಮಹಾಮಿಯವರ ಮುಂದಿಟ್ಟು, ಉಭಯಸೇವೆಯನ್ನು ಹೇಳಿ ದೇಶದಲ್ಲಿ ಯಸ್ಸು ನೆಲೆಗೊಳಿಸುವರೆಂದು ನಂಬೆ. ಇಂದು ದೇಶವು ನಿರೀಕ್ಷಿಸುತ್ತಿರು ಇಷ್ಟನ್ನು ಮಾತ್ರ.

ಮುಂದಾಳುಗಳೆಂಬವರು ಇದ ಬಿಟ್ಟು ಹಸ್ತಪತ್ರಿಕೆಗಳಿಗೆ ರಾಜಪ ಹೊರಡಿಸಿದರೆ ಅದರಿಂದ ಏನೂ ಫಲ ಆಳುವ ಮಹಾಸ್ವಾಮಿಯವರು ಈ ಖಂಡರುಗಳಲ್ಲಿ ನಂಬಿಕೆಯನ್ನಿಟ್ಟರೂ ಕಾಂಗ್ರೆಸ್ಸಿನವರಾಗಲೀ, ಧನ ಸರ್ಕಾವಂಗಳೀ ಈ ಮುಂದಾಳುಗಳೆಂದ ವಾಗಿ ಮುಂದಿಡಲ್ಪಡುವ ದೇಶದ ಅಭಿಯವನ್ನು ತಿರಸ್ಕರಿಸುವಂತಿಲ್ಲವೆಂದು ನಂಬುವೆನು. ಕರುಣಾಕರ ಮಹಾ ಸರ್ಕಾರದ ದಬ್ಬಾಳಿಕೆಯೂ, ವ್ಯಕ್ತಿಗಳ ಗಡಿಬಿಡಿಯೂ ಇಷ್ಟೇ ಸಾಕು ಈಗ ಮಾಡಬೇಕಾದುದು.

ವಿವಿಧ ವಿಷಯಗಳು.

ಅಭಿಲು ಮೊಕದ್ದಮೆ

ಶಿವಮೊಗ್ಗಾ ಮ್ಯಾಜಿಸ್ಟ್ರೇಟರು ಶ್ರೀಯುತ ಕೃಷ್ಣಮೂರ್ತಿಯವರಮೇಲೆ ಒಂದು ಮಾನಹಾನಿ ಮೊಕದ್ದಮೆ ಹೂಡಿ ಜಾಮೀನು ಕೊಡಬೇಕೆಂದು ತೀರ್ಮಾನಿಸಿದ್ದು ಈ ಮಾತಿನಲ್ಲಿ ತಾರೀದಿನವರೆಗೆ ಅವಧಿಯನ್ನು ಪ್ರತಿಕ್ಷಿಸಿ ಈ ಸೊಮಿವ ಮೆಯನ್ನು ಶ್ರೀ ಕೃಷ್ಣಮೂರ್ತಿಯವರು ಶಿವಮೊಗ್ಗ ಸಬ್ಜಸ್ ಕೋರ್ಟಿಗೆ ಅಪೀಲುಮಾಡಿದ್ದರು. ಇದು ವಿಚಾರಣೆಯಾಗಿ ಸಿವಿಲ್ಸ್ ಜಡ್ಜರು ಆಪಾದಿತರನ್ನು ಬಿಡುಗಡೆ ಮಾಡಿದ್ದಾರೆ.

ದಿವಾನರಿಗೆ ಸತ್ಕಾರ

ನಮ್ಮ ದಿವಾನರಾದ ಸರ್ ಮಿರ್ಜಾ ರವರಿಗೆ ಸಂಗ್ ಬಾನ್ಸ್ ಆಂಬ್ಯುಲೆನ್ಸ್ ಸಂಸ್ಥೆಯವರು ಒಂದು ಪ್ರಕಟಣೆಯನ್ನು ಕೊಟ್ಟಿದ್ದಕ್ಕೆ ಮೈಸೂರು ವರ್ತಕ ವರ್ಗದವರು ಇತ್ತೆ ತಮ್ಮ ಸಂತೋಷವನ್ನು ಸೂಚಿಸುವುದಕ್ಕಾಗಿ ಈ ಮಾಸ ಕೊನೆಯಲ್ಲಿ ತಾರೀಖು ಒಂದು ಸತ್ಕಾರಕೂಟವನ್ನು ಏರ್ಪಡಿಸಲಿರುವರು

ಗಾಂಧಿಜಿಯವರಿಗೆ ತಂತೀ

ಮೈಸೂರು ಜನ ಜಾಗ್ರತಿ ಸಂಘದವರು ಮಹಾತ್ಮಾಗಾಂಧಿಯವರಿಗೆ ಮೈಸೂರು ಪಕ್ಷವಾಗಿ ಅವರು ಬರೆದಿರುವ ಲೇಖನವನ್ನು ಕ್ರೂರಜನರಲ್ಲಿ ಬಹಳವಾಗಿ ತಪ್ಪು ಭಾವನೆಯನ್ನೂ ಮತ್ತು ಆತಂಕವನ್ನೂ ಉಂಟುಮಾಡಿದೆಯೆಂದೂ ತಕ್ಷಣ ಪರಿಸ್ಥಿತಿಯನ್ನು ಸ್ಪಷ್ಟಗೊಳಿಸಿ ಬರಿಯಬೇಕೆಂದೂ ತಂತೀ ಕೊಟ್ಟಿರುತ್ತಾರೆ

ಸಣಜೂರು ಸಂಸ್ಥಾನದಲ್ಲೂ ನಿರ್ಬಂಧ

ಮೈಸೂರು ಸಂಸ್ಥಾನದಂತೆಯೇ ಸವಣೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಕೆಲಸಗಾರರ್ಕಗಳನ್ನು ವಜಂದುಮಾಡಿರುವ ಉದ್ದಿಶ್ಯವಿಂದ ಸಭೆಗಳು ಮತ್ತು ಭಾಷಣಗಳನ್ನು ನಿಷೇಸಾಗಿದೆಂದು ಅಲ್ಲಿಯ ಸರಕಾರವು ೧೫ನೇ ನೆಕ್ಷನನ್ನು ಜಾರಿ ಮಾಡಿರುತ್ತಾರೆ ಸವಣೂರು ಸಂಸ್ಥಾನವು ಹುಬ್ಬಳ್ಳಿಗೆ ೨೦ ಮೈಲಿ ದೂರದಲ್ಲಿದೆ

ಉಪ ಚುನಾವಣೆ

ಸ್ಯಾವಿಧಾಯಕ ಸಭೆಯ ಚುನಾವಣೆಯ ವಿಷಯದಲ್ಲಿ ಶ್ರೀ ಬೇಲೂರು ಶ್ರೀನಿವಾಸಯ್ಯಂಗಾರ್ಯರು ಶ್ರೀಯುತ ಗುರುವಾರೆಡ್ಡಿಯವರ ಮೇಲೆ ಒಂದು ಮೊಖದ್ದಮೆಯನ್ನು ಹೂಡಿದ್ದಾರಷ್ಟೆ. ಈ ಮೊಖದ್ದಮೆಯನ್ನು ಶ್ರೀಯುತ ದಾಸಪ್ಪನವರು ಇವರಿಬ್ಬರಿಗೂ ರಾಜಿಮಾಡಿಸಿದರು. ಈ ರಾಜಿಯ ಪತ್ರಕ್ಕನಂತೆ ಶ್ರೀಯುತ ರೆಡ್ಡಿಯವರು ತಮ್ಮ ಕೆಲಸಕ್ಕೆ ರಾಜೀನಾಮೆಯನ್ನಿತ್ತಿದ್ದಾರೆ. ಸರ್ಕಾರದವರು ಈ ರಾಜೀನಾಮೆಯನ್ನು ಅಂಗೀಕರಿಸಿದ್ದಾರೆ. ಈ ಸ್ಥಾನಕ್ಕೆ ಜನವರಿ ೨೮ ನೇ ತಾರೀಖು ಉಪಚುನಾವಣೆ ನಡೆಯುತ್ತದೆ

ದಂಡಿನ ಪಕ್ಷಿ

ಬೆಂಗಳೂರು ದಂಡನ್ನು ಮೈಸೂರು ದರ್ಬಾರಿಗೆ ಒಂದಕ್ಕೆ ಕೊಡುವ ವಿಷಯದಲ್ಲಿ ಬೆಂಗಳೂರು ದಂಡಿನಲ್ಲಿರುವ ಕಮಿಷರಿಯಟ್ ಆಫೀಸರ್‌ಗಳಿಗೆ ಒಂದು ಸಭೆ ಸೇರಿ ಒಂದು ನಿರ್ಣಯವನ್ನು ಮಾಡುವುದಕ್ಕಿತ್ತು ಬೆಂಗಳೂರು ದಂಡನ್ನು ಮೈಸೂರು ದರ್ಬಾರಿಗೆ ಕೊಡುವುದಾದರೆ ವಿಪರೀತವಾದ ರಕ್ಷಣೆಗಳನ್ನು ಕೊಡುವ ಪರಿಸ್ಥಿತಿ ಸಂಕರ ದಂಡನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ತೀರ್ಮಾನಿಸಿತು. ಈ ರಕ್ಷಣೆ ವಿಧಿಗಳನ್ನು ಗೊತ್ತು ಮಾಡಿ ಬ್ರಿಟಿಷ್ ರೆಸಿಡೆಂಟರ ಮುಂದಿರಿಸಲು ಒಂದು ಸಬ್ಕಮಿಟಿಯನ್ನು ಏರ್ಪಡಿಸಲಾಯಿತು

ರಾಷ್ಟ್ರ ಧ್ವಜವಿದ್ದ ಜಹಜು

ಬೊಂಬಾಯಿ ಮತ್ತು ಸ್ಟೇಟ್ ಸೆಟ್‌ಲ್ ಮೆಂಟ್‌ಗಳ ಮಧ್ಯೆ ಪ್ರಯಾಣ ಮಾಡುವ ಒಂದು ಜಹಜು ಭಾರತೀಯರಿದ್ದಾಗಿದೆ ಭಾರತೀಯರ ಜಹಜಿನ ಇತಿಹಾಸದಲ್ಲಿ ಇದೇ ಮೊದಲನೆಯದು. ಇದರ ಹೆಸರು ಲಲಿತ. ಇದು ರಾಷ್ಟ್ರ ಧ್ವಜವನ್ನು ಹಿಡಿದು ಸಮುದ್ರವ ಯಾನವನ್ನು ಪ್ರಾರಂಭಿಸಿತು ಈ ಜಹಜಿನ ಸಂಸ್ಥೆಯ ಹೆಸರು ನ್ಯೂ ಘೂರಿಲಾ ಸ್ಟೀಂಷಿಪ್ ಕಂಪನಿ. ಇದರ ಕ್ಯಾರ್ಯ ನಿರ್ವಾಹಕ ಮಾಲೀಕರು ಶ್ರೀಯುತ ಆ ಪೈತಲಾಲಚಿರಂದ

ಪ್ರತಿಮೆಯನ್ನು ತೆಗೆಯಬೇಕು

ಮದರಾಸಿನ ಸಾರ್ವಜನಿಕ ಪ್ರದೇಶ ಒಂದರಲ್ಲಿದ್ದ ಸೀಲ್ ಪ್ರತಿಮೆಯನ್ನು ತೆಗೆದು ಮ್ಯೂಸಿಯಂನಲ್ಲಿಡಬೇಕೆಂದು ಸರ್ಕಾರವರು ಒಂದು ಪ್ರಕಟಣೆಯನ್ನು ಹೊರಡಿಸಿರುತ್ತಾರೆ.

ಹರಿಪುರ ಕಾಂಗ್ರೆಸ್

ಹರಿಪುರದ ಕಾಂಗ್ರೆಸ್ಸಿನ ಸಿದ್ಧತೆಗಳು ಬಹಳ ಜೋರುಗಾಗಿ ನಡೆಯುತ್ತಿವೆ. ಕಾಂಗ್ರೆಸ್ ನಡೆಯುವ ವೇಳೆಯಲ್ಲಿ ಒಂದು ಫೈರನ್ನು ಇಡಬೇಕೆಂದೂ, ಇದಕ್ಕಾಗಿ ೬೦೦೦ ರೂಗಳನ್ನು ವಿಸಾಲಾಗಿಟ್ಟಿರುತ್ತದೆ ಮತ್ತು ೪೫೦೦೦ ರೂಗಳ ದಿನಸಿಕರಿಗಳನ್ನೂ ಮತ್ತು ದವಸಧಾನ್ಯಗಳನ್ನೂ ತೆಗೆಯಲಾಗುವುದೆಂದೂ ತಿಳಿದು ಬಂದಿದೆ.

ಮುಟ್ಟುಗೋಲು ಹಣ ವಾಪಸ್

ಸರ್ಕಾರದವರು ಬೊಂಬಾಯಿ ಪ್ರಾಂತಿಕ ಕಾಂಗ್ರೆಸ್ ಸಮಿತಿಯವರ ೪೦೦೦೦ ರೂಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದರು ಅದನ್ನು ಕಾಂಗ್ರೆಸ್ ಸಮಿತಿಯವರಿಗೇ ವಾಪಸ್ಸು ಕೊಡಬೇಕೆಂದು ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಲಿರುವರೆಂದೂ ಗೊತ್ತಾಗಿದೆ ಆ ಹಣವು ಬಂದೊಡನೆಯೇ ಕಾಂಗ್ರೆಸ್ಸಿನವರು ಜಿನ್ನಾಮಾಲನ್ನು ಕೊಂಡುಕೊಳ್ಳುವವರಾಗಿದ್ದಾರೆ.

ಫ್ರೀಪ್ರೆಸ್ ಜರ್ನಲ್

ಫ್ರೀ ಪ್ರೆಸ್ ಜರ್ನಲ್ಲಿನ ಮ್ಯಾನೇಜಿಂಗ್ ಡೈರೆಕ್ಟರಾದ ಶ್ರೀಯುತ ಸದಾನಂದರವರು ಬೊಂಬಾಯಿನ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಮುಂದೆ ಬಂದು ಪತ್ರಿಕಾ ಕಾನೂನಿನ ಪ್ರಕಾರ ಹ್ರಮಾಣಾಯತ್ತರು ಯಾವ ಜಾಮೀನಿನ ಅವಶ್ಯಕತೆಯೂ ಇಲ್ಲವೆ ಅವರ ಹೇಳಿಕೆಯು ಅಂಗೀಕಾರವಾಯಿತು. ಇವರು ಹಿಂದೆ ಸರ್ಕಾರಕ್ಕೆ ೧೦,೫೦೦ ರೂಪಾಯಿಗಳ ಸೆಕ್ಯೂರಿಟಿ ಕೊಟ್ಟಿದ್ದರು. ಪತ್ರಿಕೆಯು ಡಿಸೆಂಬರ್ 1 ನೇ ತಾರೀಖಿನ ಆವೃತ್ತಿಯಿಂದ ಸ್ವತಂತ್ರವಾಗಿ ಹೊರಬರುವುದೆಂದು ಗೊತ್ತಾಗಿದೆ

ಜಾಮೀನು ಮೊಕದ್ದಮೆ

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸದಸ್ಯರೂ ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಜಾಯಿಂಟ್ ಕಾರ್ಯದರ್ಶಿಯವರೂ ಆದ ಶ್ರೀಯುತ ಎ. ಎ. ಖಂದೂರವರ ಮೇಲೆ ಬೆಂಗಳೂರು ಸಿಟಿ ಮಾಜಿಸ್ಟ್ರೇಟರು ಕ್ರಿ. ಪ್ರೊ. ೧೦೬, ೧೮೨ ಮತ್ತು ೧೮೬ (೩) ಕಲಂಗಳ ಪ್ರಕಾರ ಒಂದು ಮೊಖದ್ದಮೆಯನ್ನು ಹೂಡಿದ್ದಾರೆ ಬೆಂಗಳೂರಿನಲ್ಲಿ ಕಳೆದ ಮಾಸ ನಡೆದ ಗಲಭೆಯ ಸಂದರ್ಭದಲ್ಲಿ ಆಪಾದಿತರು ವರ್ತಕ ಮಂಡಲಿಯವರಿಗೂ ಮತ್ತು ಇತರರಿಗೂ ಈ ಮಾಸ ೧೫ ನೇ ತಾರೀಖು ಪೂರ್ತಾಲವನ್ನು ಆಚರಿಸಬೇಕೆಂದು ಪ್ರೊತ್ಸಾಹಿಸುತ್ತಿದ್ದರೆಂಬುದೇ ಆಪಾದನೆ. ಶ್ರೀಯುತ ಖಂದೂರವರು ವಿಚಾರಣೆಯಾಗುವವರೆಗೆ ಯಾವ ವಿಧವಾದ ಜಾಮೀನು ಕೊಡಲು ಒಪ್ಪಲಿಲ್ಲವಾಗಿ ಅವರನ್ನು ಈಗ ಜೈಲಿನಲ್ಲಿಟ್ಟಿರುತ್ತಾರೆ ಆಪಾದಿತರು ಮೂರು ತಿಂಗಳ ಕಾಲ ಶಾಂತಿಯನ್ನು ಕಾಯಲು ೫೦೦ ರೂ. ಗಳ ಒಂದು ಬಾಂಡನ್ನೂ ಮತ್ತು ಅದೇ ಮೊತ್ತದ ಎರಡು ಸ್ಯೂರಿಟಿಗಳನ್ನು ಕೊಡಬೇಕೆಂದೂ ವಿಧಾಯಕ ಮಾಡಿರುತ್ತಾರೆ

ಥಾಯಿ ಪರಮಾನಂದರ ಆಗಮನ

ನಮ್ಮ ದಿವಾನರಾದ ಸರ್ ಮಿರ್ಜಾರವರ ಕಳೆದ ವಾರ ದೆಹಲಿಗೆ ಹೋಗಿದ್ದಾಗ ಹಿಂದೂ ಮಹಾಸಭೆಯ ಮುಖಂಡರಾದ ಥಾಯಿ ಪರಮಾನಂದರವರನ್ನು ಸೈಸೂರಿಗೆ ಬರುವಂತೆ ಆಮ್ಹಾನಿಸಿದ್ದರು. ಆಹ್ವಾನಕ್ಕೆ ಮನ್ನಣೆಯಿತ್ತು ಥಾಯಿ ಪರಮಾನಂದರು ಡಿಸೆಂಬರ್ ಅಂತ್ಯದಲ್ಲಿಗೇ ಅಥವ ಜನವರಿ ಬಿಡಿಭಾಗವಲ್ಲಿ ಬರಲಿರುವರು.

ಮೈಸೂರಿನವರು ಜೋಧ್‌ಪುರಕ್ಕೆ

ಮೈಸೂರು ಸರ್ಕಾರದ ಪಕ್ಕು ವೈದ್ಯ ಕಾಮಯಲ್ಲಿದ್ದ ಡಾ|| ಜಿ ವಿ ಶ್ರೀಕಂಠಯ್ಯನವರನ್ನು ಜೋಧ್‌ಪುರ್ ಸಂಸ್ಥಾನದಲ್ಲಿ ಕೆಲಸ ಮಾಡಲು ಅವರಿಂದ ಕೊಡಲಾಗಿದೆ. ಅವರು ಅಲ್ಲಿ ವೆಟ್ರನರಿ ಇನ್ ಸ್ಪೆಕ್ಟರ್ ಆಫಿಕಾರಿಗಳ ಕೆಲಸವನ್ನು ನೋಡಿದ್ದಾರೆ.

ಹುಲಿಗಳೊಡನೆ ಕುಸ್ತಿ

೧೯೦೬ ನೇ ತಾರೀಖು ಬೆಳಿಗ್ಗೆ ೪ ಗಂಟೆ ಹೊತ್ತಿನಲ್ಲಿ ಹಂಪನೂರು ಒಳಕಬ್ಬನ ಗದ್ದೆಗೆ ಕಾಡು ಹಂದಿಗಳು ಬಂದಿರುವುದಾಗಿ ಗ್ರಾಮದಲ್ಲೆಲ್ಲಾ ಸುದ್ದಿಯು ಹೊರಟಿತು. ಗ್ರಾಮಸ್ಥರು ಈಟಿಗಳನ್ನೂ ಪೊಣ್ಣಿಗಳನ್ನೂ ಹಿಡಿದು ಕಬ್ಬಿನ ಗದ್ದೆಗೆ ನುಗ್ಗಿದರು ಆವರ ಸೈಕಿ ತಮಾಷೆಕೊಂಡಪ್ಪನ ಮಗ ರಂಗಪ್ಪ ನುತ್ತು ಸಿದ್ದಲಿಂಗಪ್ಪನ ಮಗ ರೇವಣ್ಣಪ್ಪ ಎಂಬುವರು ಹೊತೆಯೆಲ್ಲಿಯೇ ನಿರಾಯುಧರಾಗಿ ಹೋಗಿದ್ದರು ಜನಗಳ ಗದ್ದಲ ಕೇಳಿ ಹುಲಿಗಳು ಆಬ್ಬರಿಸುತ್ತಾ ರಂಗಪ್ಪ ಮತ್ತು ರೇವಣ್ಣಪ್ಪ ಇವರ ಕಡೆಗೆ ಬಂದವೆಂತೆ ಇವರು ನಿರಾಯುಧರಾಗಿದ್ದರು ಇತರರು ಹುಲಿಗಳ ಆರ್ಭಟ ಕೇಳಿ ದೂರದಲ್ಲೇ ಇದ್ದರು.

ರಂಗಪ್ಪನು ಕಾಲುಸ್ತು ಹಿಂದೆಗಯಲಿಲ್ಲ. ಹುಲಿಯನ್ನು ಎದುರಿಸಿದ.ಎರಡರಲ್ಲಿ ಒಂದು ಇವನ ಮೇಲೆ ಹಾರಿ ಕುತ್ತಿಗೆ ಹಿಡಿಯಲು ಬಂದಿತು ಅದರ ಮುಂಗಾಲುಗಳನ್ನು ಹಿಡಿದ. ಕೆಡವಿದ ಅಂಗಾಲು ಮೇಲಾಗಿ ಬಂದಿತು. ತಾನೇ ಅದರ ಮೇಲೆ ಮಲಗಿ ಮುಂಗಾಲುಗಳನ್ನು ತನ್ನ ಮೊಣಕೈಗಳಿಂದ ಎತ್ತಿ ಹಿಡಿಮಕೊಂಡು ಕೈಗಳಿಂದ ಕುತ್ತಿಗೆಯನ್ನು ಬಲವಾಗಿ ಒತ್ತಿದನು.ಹುಲಿಯು ಕೆನ್ನೆಗೆ ಮುತ್ತು ಕೊಟ್ಟಿತು ರಂಗಪ್ಪನಿಗೆ ರಕ್ತ ಧಾರಾಕಾರವಾಗಿ ಸುರಿಯ ಎತ್ತಿತು ತಪ್ಪಿತು. ಆದರೂ ತನ್ನ ಪಟ್ಟು ಬಿಡಲೇ ಇಲ್ಲ. ಇವನ ಭಾವಮೈದುನ ಇವನ ಸಂಕಟ ನೋಡಿ ಓಡಿಬಂದು ಪೊಣ್ಣಿಯನ್ನು ಹುಲಿಯ ಬಾಯಿಯೊಳಕ್ಕೆ ಇಟ್ಟು ಎತ್ತಿದನು. ಇತರರು ಧೈರ್ಯ ಮಾಡಿ ಸಮೀಪಕ್ಕೆ ಬಂದು ಪೊಣ್ಣಿಗಳಿಂದ ಹೊಡೆದು ಹುಲಿಯನ್ನು ಕೊಂದರು.

ಇನ್ನೊಂದು ಹುಲಿ ರೇವಣ್ಣಪ್ಪನ ಮೇಲೆ ಬಿತ್ತು. ಹುಲಿಯು ಆರ್ಭಟಿಸುತ್ತಾ ಇವನ ಮೇಲೆ ಬೀಳಲು ಬಂತು. ಅದರ ಮುಂಗಾಲುಗಳನ್ನೇ ಎರಡು ಕೈಗಳಿಂದ ಹಿಡಿದು ಎದುರಿಸಿದ. ಹುಲಿಯು ಇವನ ಕುತ್ತಿಗೆ ಹಿಡಿಯಲು ಪ್ರಯತ್ನಿಸಿತು. ಕೂಡಲೆ ತನ್ನ ಬಲಗೈಯನ್ನು ಹುಲಿಯ ಬಾಯಿಯೊಳಗೆ ಇಟ್ಟನು. ಹುಲಿಯು ನಾಲ್ಕು ಕೋರೆಹಲ್ಲುಗಳು ಮಣಿಕೈಗೆ ನಟ್ಟು ರಕ್ತವು ಧಾರಾಕಾರವಾಗಿ ಸುರಿಯಿತು ಆಷ್ಟರಲ್ಲಿಯೇ ಗ್ರಾಮಸ್ಥರ ಪೈಕಿ ಒಬ್ಬಾತನು ಭರ್ಜಿಯಿಂದ ಹುಲಿಯನ್ನು ತಿವಿದನು ಹುಲಿಯು ಸತ್ತು ಬಿದ್ದಿತು.

ರಕ್ತಮಯವಾಗಿದ್ದ ಜಟ್ಟಿಗಳು ಭೇರವಸಾಗರದ ಆಸ್ಪತ್ರೆಗೆ ಸಾಗಿಸಲ್ಪಟ್ಟರು. ಅಲ್ಲಿ ಈವರೂ ಗುಣಮೊಂದಿದರು.

ಜಿಲ್ಲಾ ಅಧಿಕಾರಿಗಳು ಒಬ್ಬೊಬ್ಬನಿಗೆ ೧೫ ರೂಪಾಯಿನಂತೆ ಬಹುಮಾನವನ್ನು ಕೊಟ್ಟರು.

ತಾಂಬೂಲ ಸೇವನೆಗೆ ನಾಚಿಕೆ ಏಕೆ?

ಲೇಖಕರು:— ಶ್ರೀಯುತ ಎ. ಪಿ. ರಾಮ್, ಮಂಡ್ಯ

ಪಾಶ್ಚಾತ್ಯ ದೇಶದ ಪ್ರಭಾವಾತಿಶಯತೆಯ ಅಡಿಯಲ್ಲಿ ನಮ್ಮ ಭಾರತ ದೇಶದ ಅನೇಕ ಪ್ರಾಚೀನ ಪದ್ಧತಿಗಳು ನಶಿಸಿ ಹೋಗುತ್ತಿವೆ. ಅಂಧಪರ್ಯಾಳಿ ದಾಸ್ಯತೀತಿಯಾಗಿಯೂ, ಆರೋಗ್ಯದಾಯಕ ಪದ್ಧತಿಯಾಗಿಯೂ ಒಮ್ಮೆ ಪ್ರಾಚೀನ ಕಾಲದಿಂದಲೂ ಪ್ರಾಥಿಮಲ್ಲಿ ಬಂದಿದ್ದ ತಾಂಬೂಲ ಸೇವನೆಯೂ ಒಂದಾಗಿದೆ. ಈ ಒಂದು ಸಣ್ಣದು ವಿಷಯದ ಮತ್ತು ಉಪಯೋಗಗಳನ್ನು ಕರಿತು ಡಾಕ್ಟರ್ ಪಿ. ಬಿ. ಕಾಮತ್‌ರವರು ಹೀಗೆ ಹೇಳಿರುವರು. —

ಸಾಮಾನ್ಯವಾಗಿ ತಾಂಬೂಲವನ್ನು ಊಟವಾದ ನಂತರ ಸೇವಿಸುವ ಪದ್ಧತಿಯು ನಮ್ಮಲ್ಲಿದೆ. ಒಳ್ಳೆಯ ವಿಳೆಯೆಲೆಗೆ ಸಾಕಷ್ಟು ನೀರ್ ಹಚ್ಚಿ ಪುಡಿ ಅಡಿಕೆ ಕಾಚು, ಸಾಯ ರು ಪಾಲುಗಳನ್ನು ಕೊಂಚ ಸುಗಂಧ ದ್ರವ್ಯವಾಂಡಿಗೆ ವಿಳೆಯೆಲೆಯ ಮಧ್ಯೆ ನುಣಿಸಿ ಸೇವಿಸುತ್ತೇವೆ. ಇದಕ್ಕೆ ಬೇರೆಯೆಂದು ಕರೆಯುತ್ತಾರೆ. ಇದಲ್ಲದೆ ಮುಂಜೆಯೇ ಅತಿಥಿ ಮುಂತಾದ ಸುಗಂಧ ದ್ರವ್ಯಗಳನ್ನು ಸೇವಿಸುವ ಪದ್ಧತಿಯೂ, ನಮ್ಮಲ್ಲಿ ಬಹಳ ಪ್ರಚಾರದಲ್ಲಿದೆ. ಈ ರೀತಿ ತಾಂಬೂಲ ಸೇವಿಸುವುದು ಬಹಳ ಆರೋಗ್ಯಕರವಾಗಿದ್ದೂ, ಮತ್ತು ಆರೋಗ್ಯಕರವಾಗಿಯೂ ಇರುತ್ತದೆ.

ನಮ್ಮ ಬಾಯಿಯು ಯಾವಾಗಲೂ ತೇವವಾಗಿರುವುದರಿಂದ ಹೊರಗಿನ ಧೂಳು ಮತ್ತು ಬಾಯಿಯಲ್ಲಿ ಹುಟ್ಟುವ ಕ್ರಿಮಿಕೀಟಾಣುಗಳೂ ಬಂದು ಅಂಟಿಕೊಳ್ಳುವ ಸಂಭವವಿರುವುದು. ಈ ರೀತಿ ನಮ್ಮ ನಾಲಿಗೆಗೆ ಮೇಲೆ ಜಮಾಯಿಸಿದ ಈ ಹೊರಗಿನ ಕೆಟ್ಟ ಪದಾರ್ಥಗಳಿಂದ ಮನುಷ್ಯರು ಯಾವ ಬಾಯಿಲೆಗಾದರೂ ತುತ್ತಾಗಬಹುದು. ಇದೂ ಒಪ್ಪಿದೆ ನಾವು ಆಹಾರ ತೆಗೆದುಕೊಳ್ಳುವಾಗ ಕಚ್ಚಿದಿಂದ ಜೊನ್ನಾಗಿ ಸುರಿತ ಆಹಾರವು ಹಲ್ಲಿನ ಸಂದುಗಳಲ್ಲಿ ಸೇರಿಕೊಳ್ಳುತ್ತದೆ. ಇಲ್ಲಿ ಸೇರಿಕೊಂಡ ಆಹಾರವು ಕಾಲ ಕ್ರಮೇಣ ಅಲ್ಲೇ ಕೊಳೆಯುವುದರಿಂದ ಬಾಯಲ್ಲಿಲ್ಲಾ ಬಹಳ ದುರ್ವಾಸನೆಯುಂಟುಮಾಡುತ್ತದೆ. ಹೀಗೆ ಕೊಳೆತ ಆಹಾರದಿಂದ ಕ್ರಿಮಿಗಳು ಉತ್ಪನ್ನವಾಗಿ ನಮ್ಮ ಆರೋಗ್ಯವನ್ನು ಕೆಡಿಸುತ್ತವೆ. ಇದೇಂತಹ ಸುಲಭವಾಗಿ ಮನುಷ್ಯನ ನೈಸರ್ಗಿಕ ಆರೋಗ್ಯವನ್ನು ಕೆಡಿಸುವ. ರೋಗ ಸುಲ್ಲುವುದೂ ಇರಲಾರದು. ಆದ್ದರಿಂದ ನಮ್ಮ ಬಾಯಿಯನ್ನು ಯಾವಾಗಲೂ ಶುಭ್ರವಾಗಿಟ್ಟುಕೊಂಡಿರುವುದು ನಮ್ಮ ಮೊದಲನೆಯ ಕರ್ತವ್ಯ. ಮತ್ತು ಈ ಕರ್ತವ್ಯವನ್ನು ನಿರ್ವಹಿಸಲು, ತಾಂಬೂಲವೇ ಬಂಧು ಸಹಕಾರಿ.

"ವಿಳೆಯೆಲೆಯ ಗುಣ"

ವಿಳೆಯೆಲೆಯು ರುಚಿಯಲ್ಲಿ ಒಂದು ಬಗೆಯ ಸುವಾಸನೆಯುಳ್ಳ ಉಷ್ಣ ರಸವಿದೆ. ಅಡಿಕೆಯಲ್ಲಿ ಸಸ್ಯಕ್ಷಾರಗಳು ಹೇರಳವಾಗಿರುತ್ತೆ. ಈ ಕ್ಷಾರದ ಪರಿಣಾಮವು ಕೆಲವಕ್ಕೆ ಹೆಚ್ಚಾಗಿಯೂ, ಕೆಲವಕ್ಕೆ ಕಡಿಮೆಯಾಗಿಯೂ, ಇರುವುದು. ಕ್ಷಾರವು ಹೆಚ್ಚಾಗಿರುವ ಅಡಿಕೆಯನ್ನು ಉರಿಯೋಗಿಸುವುದರಿಂದ ಒಂದು ತರಹ ತಲೆ ತಿರುಗಾಟವೂ, ಮತ್ತು ಶಿಥಿಲತೆಯೂ ಉಂಟಾಗುವುದು. ಅಂಥಹ ಸಮಯದಲ್ಲಿ ಆ ವಿಳೆಯಲೆಯ ರಸವನ್ನು ಗುಳಿಗೆ ಒಂದು ತೋಟ ಮಜ್ಜಿಗೆ ಕುಡಿಯುವುದು ಅಡಿಕೆಯನ್ನು ಉಪಯೋಗಿಸುವುದನ್ನು ನಾವೆ ಬಹಳ ಎಚ್ಚರಿಕೆಯಿಂದಿರಬೇಕು ಯಾವಾಗಲೂ, ಚೆನ್ನಾಗಿ ಬೇಯಿಸಿ ಒಣಗಿಸಿದ ಅಡಿಕೆಯನ್ನು ಉಪಯೋಗಿಸಬೇಕು. ಹಸಿಯ ಅಡಿಕೆಯೇ ನೋಟಿಲ ಕೆಟ್ಟ ಪ್ರಭಾವಕ್ಕೆ ಕಾರಣ. ಅಡಿಕೆಯಲ್ಲಿ ಹಲ್ಲು ಸವಿಗೆ ಮತ್ತು ಗಂಟಲುಗಳನ್ನು ಸೇರಿಸುವ ರಸ ಪದಾರ್ಥಗಳನ್ನು ನಾಶಗೊಳಿಸಿ ಶಕ್ತಿಯನ್ನು ಕೊಡುವ ಒಂದು ವಿಶೇಷ ಗುಣವಿರುವುದು. ಸಾಮಾನ್ಯವಾಗಿ ಬಾಯಿನಲ್ಲಿನ ಹುಣ್ಣುಗಳಿಗೂ ಕೂಡ ಇದು ಪರಿಹಾರವಾಗಿ ಉಪಯೋಗಿಸುತ್ತೆ

ಅಡಿಕೆ ಮತ್ತು ಸುಣ್ಣ

ಅಡಿಕೆಯಲ್ಲಿ ವಿಶೇಷ ಶೀತಲಯಿರುವುದರಿಂದ ರಕ್ತವನ್ನು ಶುದ್ಧಿಮಾಡುತ್ತದೆ. ಅಡಿಕೆಯನ್ನು ಹೆತ್ತು ಸೇವಿಸುವುದರಿಂದ ಬಾಯಿ ಒಣಗಿಹೋಗುವುದು. ಮತ್ತು ವಾಲಿಗೆಯೂ ಒರಟಾಗುವುದು. ಬಾಯಲ್ಲಿನ ಮತ್ತು ಗಂಟಲಿನ ಹುಣ್ಣುಗಳನ್ನೂ ಮತ್ತು ಜೀರ್ಣಾಂಗವ್ಯೂಹದಲ್ಲಿನ ಅಲ್ಸರ್‌ಗಳನ್ನು ಗುಣಪಡಿಸುತ್ತದೆ.

ಸುಣ್ಣವಲ್ಲಿ ಒಂದು ತರಹ ಸೆಡತನ ಗುಣವಿದೆ. ಇದನ್ನು ಹೆಚ್ಚು ಸೇವಿಸುವುದರಿಂದ ಬಾಯಿ ಹುಣ್ಣುಹೋಗುವುದೂ ಅಲ್ಲದೆ ಒಂದು ತರಹದ ಕೆಟ್ಟ ವಾಸನೆಯೂ ಉತ್ಪತ್ತಿಯಾಗುತ್ತದೆ. ಸರಿಯಾದ ಪರಿಣಾಮದಲ್ಲಿ ಸರ್ವ ಪದಾರ್ಥಗಳನ್ನು ಸುಗಂಧದೊಂದಿಗೆ ಬೆರಸಿ ಸೇವಿಸುವುದರಿಂದ ಒಂದು ಸುಖಕರವೂ, ಮತ್ತು ಹಿತಕರವೂ ಆದ ಸವಾಸನೆಯು ಬರುವುದು

ವಿಳೆಯೆಲೆಯನ್ನು ಉಪಯೋಗಿಸುವುದಕ್ಕೆ ಮೊದಲು ತದರ ತೊಟ್ಟು ನಾರುಗಳನ್ನು ತೆಗೆದುಹಾಕಿ ಸೇವಿಸಬೇಕು. ತಾಂಬೂಲವನ್ನು ಮಾತೆಕೊಳ್ಳಲು ಒಂದು ನಿಯಮವಿಲ್ಲ. ಹೆಚ್ಚಾಗಿ ಸೇವಿಸುವವರಿಂದ ಯಾವ ಹಾನಿಯೂ ಉಂಟಾಗುವುದಿಲ್ಲ. ಬಾಯಿಗೆ ಒಂದು ಬಣ್ಣವನ್ನು ಕೊಟ್ಟು, ಕೊಟ್ಟಿಗೆ ಸೇವಿಸಲಂತಹ ಪಾಚಕ ರಸವನ್ನು ವಿಶೇಷವಾಗಿ ಉತ್ಪತ್ತಿಮಾಡುತ್ತದೆ

(ಮುಂದುವರಿಯುವುದು)

ದಕ್ಷಿಣಭಾರತ ಹಿಂದೀ ಪ್ರಚಾರ ಸಭಾ

ಮದರಾಸಿನಲ್ಲಿರುವ ದಕ್ಷಿಣಭಾರತ ಹಿಂದೀ ಪ್ರಚಾರ ಸಭೆಯು ಕಟ್ಟಡದ ವಿಷಯವಾಗಿ ಒಂದು ಸಾರ್ವಜನಿಕ ವಿಜ್ಞಾಪನೆಯನ್ನು ಹೊರಟಿದೆ ಈ ಸಭೆಯವರು ಈಗಾಗಲೇ ಮಹಾಜನರ ಸಹಾಯದಿಂದ ಒಂದು ಮೊದ್ದ ಸೈಟಿನ್ನು ಕೊಂಡುಕೊಂಡು ಅದರಲ್ಲಿ ಹಲವು ಕಟ್ಟಡಗಳನ್ನು ಕಟ್ಟಿಸಿರುವರು. ಈಗ ಒಂದು ವಿದ್ಯಾರ್ಥಿನಿಲಯವನ್ನೂ ಒಂದು ವಿದ್ಯಾರ್ಥಿನಿಲಯವನ್ನೂ ಕಟ್ಟಲು ಉದ್ಯುಕ್ತರಾಗಿರುವರು. ಇದಕ್ಕೆ ಒಂಭತ್ತುಸಾವಿರ ರೂಪಾಯಿಗಳು ಬೇಕಾಗುತ್ತವೆ. ಇದರ ಸಕ್ಷಿಪ್ತವಿವರವೆಲ್ಲಾ ರಾಷ್ಟ್ರಭಾಷೆಯ ಗೃಹಲಕ್ಷ್ಮಿಯಲ್ಲಿ ಪ್ರಕಟವಾಗಿದೆ. ದಯಾಳುಗಳು ಇದಕ್ಕೆ ಸಹಾಯ ಮಾಡಬೇಕೆಂತೆಯೇ ಈ ಕಟ್ಟಡಗಳ ನಿಧಿಗೂ ಸಹಾಯ ಮಾಡಬೇಕೆಂದು ನಮ್ಮಲ್ಲಿಗೂ ದೆಸೆಯಾಯ ದಾನಮಾಡಿದ ಮಹಾನುಭಾವರ ಹೆಸರುಗಳನ್ನು ಪ್ರಕಟಿಸುವುದಾಗಿಯೂ ದಕ್ಷಿಣಭಾರತ ಹಿಂದೀ ಪ್ರಚಾರ ಸಭೆಯ ಕೋಶಾಧ್ಯಕ್ಷರಿಗೆ ಹಣವನ್ನು ಕಳುಹಿಸುವಂತೆಯೂ.

ಕೆನರಾ ಮ್ಯೂಚುಯಲ್ ಅಷ್ಯೂರೆನ್ಸ್ ಕಂಪನಿ, ಉಡುಪಿ

ಮೇಲ್ಕಂಡ ಕಂಪನಿಯು ದ್ವಿತೀಯ ವಾರ್ಷಿಕ ವಾರ್ತಿಯ ನಮ್ಮ ಹಸ್ತಗತವಾಗಿದೆ. ಈ ವರದಿಯಿಂದ ಕಂಪನಿಯ ವಿಷಯ ವಿಷಯ ಕೆಲಸ ಚುರುಕ್ಕಾಗಿ ನಡೆಯುತ್ತಿದೆಯೆಂಬುದು ತಿಳಿದುಬರುತ್ತದೆ. ಮತ್ತು ಕೆಲಸ ಬಹಳ ವರ್ಷದ ಅನುಭವಸ್ಥರಿಂದ ನಡೆಸಲ್ಪಡುತ್ತಿರುವುದರಿಂದ ಕಂಪನಿಯ ಆರ್ಥಿಕ ಸ್ಥಿತಿಯು ಸಹ ಉತ್ತಮವಾಗಿರುವುದೆಂಬುದು ತಿಳಿದುಬರುತ್ತದೆ. ಈ ಕಂಪನಿಯ ಆಡಳಿತ ವ್ಯವಸ್ಥೆಯು ಬಹಳ ಮಿತವ್ಯಯಕರವೆಂದೂ ತಿಳಿದುಬರುತ್ತದೆ. ಈ ಕಂಪನಿಯು ಕಳೆದ ವರ್ಷದಲ್ಲಿ ಆಯಾ ಪಾಲಿಸಿಗಳಿಗೆ ಬೋನಸ್ಸನ್ನು ಕೊಡುವುದಾಗಿ ಹೇಳಿರುವುದು ಸಂತೋಷಕರವಾಗಿದೆ. ಈ ಸಾಲಿನಲ್ಲಿ ಬೋನಸ್ಸು ರೂ. 10 ರಿಂದ 15 ಕ್ಕೆ ಏರಿಸಿರುವುದು ಪ್ರಶಂಸನೀಯವಾಗಿದೆ. ಈ ಕಂಪನಿಯ ಪ್ರಸ್ತುತ ಸಾಲಿನ ಲೆಕ್ಕಪತ್ರಗಳು ಮಾರ್ಚ್ 31 ಕ್ಕೆ ಮುಕ್ತಾಯವಾಗಿದ್ದು ಅಂದಿನ ಪರ್ಯಂತ ಒಟ್ಟು ಪಾಲಿಸಿಗಳು 1—9 ರೆಷ್ಟು ಹೆಚ್ಚಾಗಿದೆ.

ಕಂಪನಿಯು ಪ್ರಯೋಜನಕ್ಕೆ ಸ್ಥಿರವಾದ ಸಹಾಯ ನಿರ್ವಾಹಕರಾದ ಶ್ರೀಯುತ ಎಂ. ಸುಬ್ಬರಾಯ ಪೈ ಮತ್ತು ಇತರ ಡೈರೆಕ್ಟರುಗಳ ಅತ್ಯುತ್ಸಾಹವೇ ಕಾರಣ. ಈ ಕಂಪನಿಯು ನಾಲ್ಕು ಜಿಲ್ಲೆಗಳಿಗೆ ಸಂಬಂಧಪಟ್ಟ ಕೆಲಸವನ್ನು ತನ್ನಲ್ಲಿ ಹೆಚ್ಚಾಗಿ ಪ್ರಗತಿಯನ್ನು ಹೊಂದಿ ಇದೀ ಭಾರತವರ್ಷದಲ್ಲಿ ಪ್ರಸ್ತುತ ಪಡೆಯಲೆಂದು ಹಾರೈಸುತ್ತೇವೆ.

ಹೈಕೋರ್ಟ್ಸ್ ಆಕ್ಷತ್ರೆ

ಶ್ರೀಯುತ ಎಸ್. ಬೀಜಾಧಿಪತಿಯವರ ಹೈಕೋರ್ಟಿನ ಆಕ್ಷತ್ರೆಯು ಮಿಷ್ಟಾನ್ನ ನಿಮಯವಾಗಿ ಒಂದು ಭೋಜನ ಏರ್ಪಾಡಾಗಿತ್ತು. ಹೈಕೋರ್ಟಿನ ಹಿರಿಯ ಕಿರಿಯ ವಕೀಲರುಗಳು ಹೆಚ್ಚಾಗಿ ಸೇರಿದ್ದರು. ಔತಣದ ಸಮಯದಲ್ಲಿ ಅವರಿಗೆ ಅನೇಕ ಸಂಭಾವನೆಗಳು ಸಲ್ಲಿಸಲ್ಪಟ್ಟವು. ಔತಣದ ಅನಂತರ ಅವರಿಗೆ ಅನೇಕ ಸಂಭಾವನೆಗಳು ಸಲ್ಲಿಸಲ್ಪಟ್ಟವು. ಔತಣದ ಅನಂತರ ಅವರಿಗೆ ಅನೇಕ ಸಂಭಾವನೆಗಳು ಸಲ್ಲಿಸಲ್ಪಟ್ಟವು.

ನಿರಾಕೆ—ಪ್ರತಿಭೆಯಿಲ್ಲದವನನ್ನು ಕುರಿತು ಈ ಬಚ್ಚಿ ಜನ್ಮ ಹೋಗೆಯಲ್ಲಿ ಅಂಥ ಎನ್ನು ವಿಷಯ ಸ್ವಾರಂಭಿಸಿ ಬಿಟ್ಟಿರಿ?

ಕಾಗೂಜಿ—ಸೀರೆಯಲ್ಲಿ ನೇರಿಯ ಹೆಣ್ಣು.

ಸಾಯಿಯ ಮಂಕುಬೂದಿ

ಸ್ವಾಮಿ ಶ್ರೀ ಶಿವಾನಂದ ಸರಸ್ವತಿಯವರ ವೇದಾಂತ ಸಾಧನೆಯಿಂದ

ಮನೋಹರವಾದ ಕಾಡು ವನಗಳು ಅ
ತ ಮೋಹಗೊಳ್ಳುವಂತಿದ್ದರೂ, ಅವು
ಪ್ರ ಪು. ಸಿಂಹ, ಕರಡಿಗಳು ಮತ್ತು
ಘೋರ ಮೊಸಳೆಯಂತಹ ಭಯಂಕರ ಕಾ
ಪ್ರಾಣಿಗಳ ಆಡಗಿರುತ್ತವೆ ಸಘರ
ದ ಪಥವನ್ನು ಕೂಡಿಸಿಕೊಡುವ
ಸ್ವಾಭಾವಿಕ ಬೆಟ್ಟಿಗ ಹಿಂಭಾಗದಲ್ಲಿ
ಸಹಕಾರವಾದ ಮುಳ್ಳನ್ನು ಮುಚ್ಚಿಕೊಂ
ಬಿಡುತ್ತದೆ. ಕೋಸುಗಡ್ಡೆಯ ಹೂವಿನಲ್ಲಿ
ರಳುತ್ತದೆ. ಬಿರ್ವ ಸುಂದರ ತರುವೆ
ಮನೋಹರವಾದ ಕೆಂಪು ಬಿಗಳ ಮೋಹ
ಗ ಮಿಗುಳ್ಳನೆಯ ಕೆಳಭಾಗದಲ್ಲಿ,
ಪಕ್ಷಿಗಳ ಪಾತಾಳಗಳು, ನೇತು,
ಸ್ಥ ರಾಣವು ಸುಲಿವಾಟು, ಅನೂಯೆ,
ಸ್ಪಾರ ಸುಖಮಯವಾಗಿ ಆಡಗಿರುತ್ತವೆ.
ಸಿಡಿಗೊಳಿಸುವ ವೇಶ್ಯೆಯ ಬಣ್ಣ ಹಚ್ಚಿ
ತ ಟ್ಟಿಗ, ಕೆಳಗೆ ಕ್ಷಾಸುರೋಗ ಮತ್ತು
ಗಡ ಜಿಗ್ಯಗಳು ಸೂಕ್ಷ್ಮ ಕ್ರಿಮಿಗಳನ್ನು
ನಿಸಿರುವಲು. ಸ್ತ್ರೀಯ ಚರ್ಮದ ಒಳ
ಲ್ಲಿ ಮಾಂಸವೇ. ಸೌಂದರ್ಯವಲ್ಲಿ
ಸಾ ಜಿಲ್ಲಿ. ಆದು ಮಾಯೆಯು ಥಳಕು.
ದು ಮೊಸಪಾಗಿರುವ ರಬ್ಬರ ಚೆಂಡು
ಥಳ ಸೂಗವಾಗಿರುತ್ತದೆ. ಅದನ್ನು ಹರಿ
ಬಿ: ಅದು ಹಳೆಯ ಚಿಂದಿಯ ಬಟ್ಟೆ
ಯಂತಿರುತ್ತದೆ ಭಂಗಾರದ ಥಳಕು
ಪ್ರವಾ ವೇಗದ ಮಾತಿರುವ ವಸ್ತುಗಳ
ಗಳನ್ನು ಒತ್ತಾಳೆಯಿಸುತ್ತದೆ ಮಾಯ
ಯ ಜಮತ್ಕಾರಗಳಿಂದ ಮರುಳಾಗದೆ ಎ
ಜ್ಞಾನಿ. ಜಗನ್ಮಾತೆಯಾದ ಕಾಳಿ
ಯನ್ನು ವ್ಯಾಧಿಸಿ ಮೊರೆಯಿಡಿರಿ
ಕೆಯು ನಿನಗೆ ಮಾಯೆಯೆಂದೆ ಮರುಳು
ಗಾಡುವುದಿಲ್ಲ. ಅಕೆಯು ನಿಮಗೆ ವಿವೇ
ಕವನ್ನೂ ವೈತ್ತು ಜ್ಞಾನವನ್ನೂ ಕೊ
ಟ್ಟಳು. ಎಂಬು ರೂಪಾಯಿಯಲ್ಲಿ ಒಂ
ದನೆಯ ಸೌಖ್ಯವಿದ್ದು, ಪದಿನೈದು ಆಣೆ
ಯ ನೋವುಗಳೂ, ಸಂಕಟಗಳೂ, ಪಾಪ
ಗಳೂ, ಭೀತಿಗಳೂ, ಚಿಂತೆಗಳೂ ಮತ್ತು
ನೆಪ್ಪ, ಮೋಹ ಮತ್ತು ಜನನಗಳು ಮುಂ
ದಾವರಿಗಳೆ. ಕೂಡಿರುತ್ತವೆಂದೆ, ಅದು
ಜಾದ ಸೌಖ್ಯವೇ ಅಲ್ಲ ನಿಮ್ಮ ಜಂತ
ತ್ಮನ ಅನುಭವವನ್ನು ದೂರಿರಿ ಅಲ್ಲಿ
ಸೀಮಿತ ಆನಂದದ ನೆಲೆ ಬೀಡು ಇದೆ.

ಜನರು ಮುಗುಳ್ನಗೆ, ಪ್ರೇಮ, ಸೌಂದ
ರ್ಯವು ಮಾತುಗಳು, ಹೂಗಳಿಕೆ, ಒಳ್ಳೆ
ಯ ಆಹಾರ, ಒಳ್ಳೆಯ ಬಟ್ಟೆ ಅಥವಾ ಹಣ
ಇವು ಬಹುಮಾನಗಳೆಂದು ಒಟ್ಟಾಗಿ ನೇ
ಮ್ಮಾತ್ರ. ಈ ಮಾಯೆಯ ಎಲ್ಲಾ ಮೋ
ಹಕರ ಸುಳ್ಳು ವಸ್ತುಗಳನ್ನು ವರ್ಜಿಸಿರಿ,
ಪ್ರಾರಿ ಈ ಪ್ರಪಂಚದಲ್ಲಿ ನಿಜವಾದ
ಸುಖವೇ ಇಲ್ಲ ನಿನ್ನ ತತ್ಕ್ಷಮತ್ತು
ಕೃಷ್ಣನನ್ನೇ ಪ್ರೀತಿಸಿ.

ಸ್ವೇ ಪ್ರೀತಿಸಿರಿ

ನಿಮಗೆ ಸಿಗಲಾರದ ವಸ್ತುವು, ನಿಮಗೆ
ಂತರವ ತನಕವೇ ಅದು ನಿಮ್ಮನ್ನು ಬ
ಗಾಗಿ ಮೋಹಗೊಳಿಸುತ್ತವೆ ಅದು
ಸಿಗುವಾಗ ಅತಿ ತೋರಿಸಿ ಹಿಂಸಿಸುತ್ತವೆ.
ನಿಮಗೆ ಕುತೂಹಲವನ್ನುಂಟುಮಾಡತಕ್ಕ
ವ್ಯಕ್ತಿಯು, ನಿನ್ನ ಮನಸ್ಸನ್ನೂ ಮತ್ತು
ನಂಗಳನ್ನೂ ಚಿತ್ತಲಗಿಸಿ ಇಕ್ಕತ್ತಿವೆ
ನಿನಗೆ ಬೇಕಾದ ವಸ್ತುವು ನಿಶ್ಚಯವಾಗಿ
ಅದರ ಸೊಬಗು ಕಡಿಮೆ ಯಾಗುತ್ತದೆ
ವಿಷಯಾಸಕ್ತಿಯಿಂದ ವಿರಕ್ತನಾಗಿ
(ತಿರುವಳ್ಳುವರು) ಆದ್ದು ಬಿಡ
ಬೇಕೆಂದು ಆದರ್ಶವಾಗಿರುತ್ತಾರೆ ಅ
ಕೆಯನ್ನು ತ್ಯಾಗ ಮಾಡಲು ಅತ್ಯಂತ
ಕಷ್ಟವಾಗಿರುತ್ತದೆ ರಾಮ ಮಾಯೆಯು
ಕಾಮ್ಯವಾಲು ಅಧಮಾ ಮಂಕುಬೂದಿ

ಹಿಂದೊಮ್ಮೆ ಓರ್ವ ಮೊದ್ದೆ ರಾಜನು
ತನ್ನ ಭವಿಷ್ಯವನ್ನು ತಿಳಿಸಿಕೊಳ್ಳಲು
ತನ್ನ ನಂಬಿಕೆಯ ಸಂಭವಿಸೊವ್ವನ ಬಿಡ್ಡ
ರಕ್ಕೆ ಹೋದನು. ಆ ಸಂಧ್ಯಾವ್ಯ ರಾಜನಿಗೆ
ಇನ್ನೊಂದು ವರುಷದ ಒಳಕ್ಕೆದ್ದ ಒತಟ್ಟಿಗೆ
ಮರಣವು ಸಂಭವಿಸುವುದೆಂದೂ, ಮಂದಿ
ನ ಜನ್ಮವು ಹೆಂದಿಜೆಯೆಂದೂ ನಕ್ಕು ಅ
ದಾವಮೇಲೆ ಬದುವ ಜ್ಯಾಪ್ತಿ, ಈಗಿರುವ
ರಾಜ್ಯವಿಗಿಂತಲೂ ಮಿಗಿ ದೊಡ್ಡ ರಾಜನ
ನ್ನಾಗಿಸುವೆನೆಂದೂ ಭವಿಷ್ಯವನ್ನು ಶ್ರಾಡಿಸಿದನು
ಆದರೆ ಆತನ ಮಂದಿಯ ಜನ್ಮದಲ್ಲಿ ಬಂದು
ಮೀನ ಗುಣಧರ್ಮವಿರುವುದೆಂತಲೂ ಆ
ದೇನೆಂದರೆ ಆ ಮಂದಿಗೆ ಒಂದಿ ಜನ್ಮದ
ಸ್ಮರಣೆಯಿರುವುದೆಂತಲೂ, ಮತ್ತು ಆ
ಹಂದಿಯ ರಕ್ತದನ್ನು ತಿನ್ನಾ ಒಂದು ನೈ
ಶಿಷ್ಯವ್ಯ ಇರುವುದಾಗಿಯೂ, ಅದು ಯಾ
ವ್ಯತ್ತೆಂದರೆ ಆ ಹಂದಿಯ ಮನೆಯ ಮೇಲೆ
ನಕ್ಷತ್ರವಂತಿಯವ ಬಂದು ಹುಟ್ಟಿ ತರು
ವುದಾಗಿಯೂ ತಿಳಿದಿದ್ದು ಆ ಸಾಧುವಿನ
ನುಡಿಗಳಲ್ಲಿ ವಿಶ್ವಾಸವಿಟ್ಟು ರಾಜನು ಬ
ಕ್ಷರೀಕ್ಯಾಗ ಮಾಡಲು ನಿಶ್ಚಯಿಸಿದನು
ಮತ್ತು ಮಂದಿನ ರಾಜನಾಗಕ್ಕಿ ತನ್ನ
ಕುಮಾರನನ್ನು ಕರೆದೆ. ತನ್ನ ಮರಣಾನಂ
ತರ ರಾಜಕುಮಾರನು ಸಂಪತ್ಪ್ರವಂತಿಯಾಗಿ
ಯೆಮೇಲೆ ಮಸ್ಟೆರುವ ಹಂದಿಯನ್ನು
ಹುಡುಕಿಪಜೇಕೆಂತಲೂ ಮತ್ತು ಕಿತ್ತಿನಿಗೆ
ಅನ್ನು ಜಾಗದಿಂದ ಮಾಡದು ಕಾಲ್ಲಿ
ಬೇಕೆಂತಲೂ ಆಜ್ಞಾಪಿಸಿದನು ಆ ರಾಜ
ಕುಮಾರನು ಹಾಗೆಯೇ ನಡೆಯಿಸುವೆ
ನೆಂದು ವಚನವಿತ್ತನೆಂದು.

ಆ ರಾಜನು ಸಾಧು ವಿನ ಭವಿಷ್ಯತ್ತಿನಂ
ತೆಯೇ ಒಂದಾನವೊಂದು ಅಂತ್ಯವಲ್ಲಿ ಮಾ
ಣ ಹೊಂದಿದನು. ಮತ್ತು ಆತನ ಎರಡ
ನೆಯ ಜನ್ಮವಲ್ಲಿ ಹಳಯ ಮೇಲೆ ವಿಳಯ
ಮಚ್ಚಿಯಳ್ಳಿ, ಹಂದಿಯಾಗಿ ಜನಿಂದನು
ಆದರೆ ಪ್ರಕೃತಿಯಿಂದ ಕಾಪಲ ಅತನಿಗೆ ಪ
ಹುವಾನಾನಾದನು ಮೆಣ್ಣ ರಿಂಗಿ

ಆ ರಾಜನ ನಗನು ಅನೇಕ ಕಾಲ
ಳ್ಳ ಆ ಹಂದಿಯನ್ನು ಹುಡುಕಿಸಿದನು
ಆದರೆ ಹನೆಯ ಮೇಲೆ ನಕ್ಷತ್ರವಂತಿಯವ
ನ್ಮಚ್ಚಿಯುಳ್ಳ ಹಂದಿಯನ್ನು ಹಡೆ ಎನ
ಲು ಬಹಳ ಕಾಲ ಹಿಡಿಯಿತು. ಆಗ ಅವ್ಯ
ರೊಳಗೆ ಆ ಹೆಣ್ಣು ಹಂದಿಯು ಒಳಗೆ
ಮರಿಗಳನ್ನು ಹೆತ್ತಿತ್ತು. ಮತ್ತು ಮನಸ್ಸಿ
ನ ಅವೇಗ್ಯವನ್ನು ಮೈನೇಲೆನ್ನು ಹಚ್ಚಿ
ಕೊಂಡು ಕೊಚ್ಚೆಯಲ್ಲಿ ತನ್ನ ಮರಿಗಳೊಂ
ದಿಗೆ ಅತ್ಯಾನಂದದಿಂದ ಇತ್ತು. ಮತ್ತು
ತನ್ನ ಪ್ರೀತಿಯ ಮಕ್ಕಳೊಂದಿಗೆ ಗುಟುಕಿ
ತ್ತಲೂ ಗಮಮತ್ತಲೂ ಒಳ್ಳೆ ಸಂತೋಷ
ದಿಂದಿತ್ತು ವಿಶ್ವ ಅಮೃತದಷ್ಟು ಮಧುರ
ವಾದ ಆಹಾರವಾದ ಮಾನವನ ಅಮೇ
ಧ್ಯವನ್ನು ಪಕ್ಕಗಿ ಯಾವುದಾಗಲೂ
ಮಿಸ್ಸಿ ಕಾಣ ಎಂದೆಂದಿಗೂ ತಿನೆದು
ಎಂಬ್ಯಾಗಲೂ, ಬಕೆಯ ಮಿಮ್ಮ ಆ
ಹಂದಿಗಿಂತಲೂ ಕೀಳಾಗಿರುವುದನ್ನು ಬಿಟ್ಟಿರಲೂ
ಯಾರಿಂದಲಿಗೆ ಸಾಧ್ಯವಿಲ್ಲ

ಕಿಲಾಸು ಶ್ರವಣ ತಿ ಇಕಮಾರ
ನು ತನ್ನ ಬಾಲ್ಯದ ತಪ್ಪೆಯಿಂದ ಕೈ
ಯ್ದು ಮೈಲಿ ಮಾಣಗಳ್ಳ ಹಿಸಿದ ಅವ
ನ್ನು ಕೊಲ್ಲಲು ಒಂದನೆ, ಅದರೆ ಆ
ಹೆಣ್ಣಿ ಹಂದಿಯು ಅತ್ಯಂತ ಪ್ರೀತಿಪ್ರ ತೆಯಿಂ
ದ, ತನ್ನ ಅಂದವಾದ ಮತ್ತು ಮಮತ್ವಾದ
ಎನೇಕ ಮುದ್ದಿಗಳು ಮರಿಗಳ್ಳು ಆ ಕೂಡಲೆ
ಬಿಟ್ಟು ಎಷ್ಟುವುದೆ ಆಗಿದ್ದುಹೆಂತಲೂ,
ಮತ್ತು ತ ಚಿಕ್ಕವುಮ್ಮಿನೆಲ್ಲಿ ತನ್ನ ಆ
ನಂದಕರವಾದ ದಿನ್ನ ಜೀವ ನವನ್ನು
ಕಂಡಗೆಯಿಂದ ಉಳಿಸಿ ಕಾಪಾಡಬೇಕೆಂತ
ಆ ಬೊಲೆಯಿಟ್ಟಿ ಆಗ ಆ ಯಜಮಾ
ನಾರನು ಆ ಹಂದಿಯ, ಹಿಂದಿನ ಜನ್ಮದ
ವೃತ್ತಾಂತವನ್ನು ಹೇಳಿದನು. ಮತ್ತು ಮುಂದಿನ ಜನ್ಮದ
ಲ್ಲಿ ಇನ್ನೂ ದೊಡ್ಡ ರಾಜನಾಗಿ ವಿಕ್ರಮ
ಸಂಧವನನ್ನೂ. ತಿಳಿದೆ ಆ ಕೂಡಲೆ ಸ
ಯಸ್ಸಕಾರಿಂದ ಮುಂದಿನ ಯಾವ ಸಿಂಹಾ
ಸನವನ್ನು ಬೇಗ ಹತ್ತಬಹುದೆಂಬುದ
ನ್ನೂ, ವಿವರವಾಗಿ ವಿವರಿಸಿ ಜ್ಞಾಪಿಸಿ
ದನು.

ಆ ಹಂದಿಯು ಆಗ ತನಗೆ ಹಿಂದಿನ
ಜನ್ಮದ ಸ್ಮರಣೆಯಲ್ಲಿ, ಮುಂದಿನ ಜನ್ಮದ
ತಿವಂತಿಕೆಯಿಂದ ಗೊತ್ತಾಯಿತು ಗಿ
ಯೂ, ತಮ್ಮ ತನ್ನ ಮುದ್ದು ಮರಿಗಳನ್ನು
ಮತ್ತು ಅನಂದವನ್ನೂ ಮೊದಲೆ ಬಿಟ್ಟುಬರಲು
ಬಾನ ತೆಂಗಿನ ವಿಚಾರವನ್ನು ಒಡನೆಯು ಬಂದಿ ಗಾ ಸಾಧ್ಯವಿಲ್ಲವೆಂದೂ
ಹೇಳಿತು. ಈ ಶ್ರೇಷ್ಠವಂತಿಯ ತತ್ಕ್ಷಣ
ಎಳಿಕೆಯ ಮತ್ತು ಹುಟ್ಟಿಕರವಾದ ಸ
ನ್ನೆಯು ಈಗಿನ ಹಂದಿಯ ಜನ್ಮವೆಂತಲೂ,
ಪರ್ವ ಜನ್ಮದ ಜ್ಞಾನವೆಂದಿಯ ಜನ್ಮ
ವನ್ನು ಎಚಕಾರಿಂದ ತ್ಯಜಿಸಲು ಗೆಯಿಂ
ಹೆಚರವನ್ನು ಬಿಟ್ಟಿ ಬಿಡಬೇಕಾಗಿಯೂ ಎ
ನ್ನು ಸಲಿಸಿ ಆ ತಿರ್ಯಾ ತೆಳಿಸಿದರೂ, ಆ
ಯಜಮಾನರನು ಬಂದಿಯನ್ನೊಪ್ಪಿಸ
ಲಾಗಲಿಲ್ಲ ಸಂತರ ಆ ರಾಜಕುಮಾರನು
ಸಿಟ್ಟುಗೊಂಡು ಬಿನ್ನಾಗಿ ಹಂತಿಯಿಂದ
ನ. ನಾಯಿಯು ಪ್ರೀಯವಾದ ಯಂತ
ಳ್ಳಿ ಗನುಸಾರಿ ಆಲಿಯ ಮೇಲೆ ಹಾಲು
ಗಳು ಹುಟ್ಟಿನಿದಾಗ ತಡಿತತ್ತವ ಮ
ತ್ತು ಸುಂಕ. ವಿಷಯ ನ್ನೀಗ ವಿಕ್ಕೀ
ಕಾಣಂತೆ ಕೂಪಿತ್ತವೆ.

---

* * *

ಜಂಬಲಗುಣ್ಣಾ--ವೈಎಕರನ್ನು ಕ
ರಿತ.—ನಿಮಗೆ ಕುಳಿಯೂಬಿತೋ.

ವೈದ್ಯ—ಕಾಫಿ ಕುಡಿಯಂ ಪದ್ಧತ
ಬಟ್ಟೆಷ. ಇದರೆ ತಿಕಾಕ್ಷಣಕ್ಕೆ ಸ್ವಲ್ಪ ಹಾ
ಲು. ಸರ್ಕಾರ ಮೆಣ ಕುಡಿಯುತ್ತೀರಿ

ಮಧುರವಾಣಿ.

(ಸಂಗ್ರಹವಿದ್ದು.)

ಲೇಖಕರು.— ಸೌಭಾಗ್ಯವತಿ ಟಿ ಎಸ್. ಇಂದಿರಮ್ಮ, ಬೈಸೂರು.

—

ನುನಾಸ್ಯವೆ ಜೆಯೆಯ ಅಪಾಸ ಒಂದಿ
ಯಂಬೆ ಗೊಬ್ಬಾಗುತ್ತದೆ. ಪ್ಲಾಸ್ಟಿಕ್ಕಿ ಆ
ಮ್ಲಾಟಿಸಿದೆ ಅಮ ಮೇ-ಎಂಬಂತೆ ಕ್ಲೇ
ವ್ಯಾಸಕ್ಕಿ ಮಿಂದೆಯಾಗ್ರಾಲೆಗಳನ್ನು ಹೊ
ಲಿ ಸಿಗೆ ಕರ್ತವ್ಯಗಳನ್ನು ತಿಳಿ.

೦ ೦ ೦

ಧಾರಾಳ ಬುದ್ಧಿಯನ್ನು ಕಲಿ. ವಿದ್ಯಾ
ಹೈದಯೂರಿಲು ತಪ್ಪಿಸಿನ ಧಾರಾಳ
ಮಾಗಾನವನಿ ಮಾಡಿಯಾಗಿ ಜಾನ
ಕ ವಿನಯ, ನಿನ್ನಷ್ಟು ಸಾ ನಿಲ್ಲವೆಯೋ
ಅಷ್ಟೆಯೂ ಒಪ್ಪಿನಂಬಿ.

೦ ೦ ೦

ನಿನ್ನವರಿಂಬಿನ್ನಿರ ನಾವು ಎಲ್ಲಾ
ಸೋದರಗಳೆಂಬ ಭಾವಾಗ ಬದುಮು. ದೆಸ್ಯ
ಹಿಂದ ಕಾಂಬರಿಗೆ ಏಕ್ಯವೂ ಸತ್ಯ
ಮಾಡಿ.

೦ ೦ ೦

ಧೈರ್ಯಾಸಕ್ತರಾಗಿರು. ಮಾತ್ಯಾಗಾನಾ
ನಿಜೆಡೆ ಆಂಬಿಯನ್ನು ಕಲಿ. ಬಿಂಗೆಯ
ಮಾತನ್ನು ಕೂಡಾ ಅಡಿಪೀಡ

ಸ್ಯಕ್ಕೇ ನಿಜವಾದ ಪ್ರಾರ್ಥನೆ. ಸುಳ್ಳು
ಪ್ರಿಯ ತಂದೆ ರಾಮುಗಳಿಗೆ ಇಹಪರ ಸುಖ
ಗಳನ್ನೊಂಟುಮಾಡುವುದಿಲ್ಲವೊಯಿಗೆ ಅವರು
(ಮಾನವಿಕ್ಕಿಗಳು) ದುಃಖವ ನತೆಯ
ವುದನ್ನು ತಪ್ಪಿಸುತ್ತಾರೆ.

೦ ೦ ೦

ಸ್ತ್ರೀ ನಿಜಾಂಪು ಮಿತ್ರನೇ ಸರಿ. ಸು
ಸುಜ್ಞಾನಸ್ನು ಮುಖಾಂತರದಿಂದ ಲೋಕವಾ
ದ ನರಕಕ್ಕೆ ಕಾರಣಳಾಗಿ ಪಶ್ಚಾತ್ತಿಯಿಂದ
ಸ್ತ್ರೀತೆಯಾದ ಸ್ವರ್ಗಕ್ಕೆ ಸೋಪಾನಳಾಗಿ ರಕ್ಷ
ಳಾಗಿ ಹೆಂಗಸಾ ವಿಚಾರವನ್ನು ಅತ್ಯಂತ
ಪ್ರಮುಖವಾ ತತ್ಕ್ಷಮಿಸರ್ಕಾರನ್ನೂ ತಾಯಿ
ಬಿಟ್ಟಿದ್ದಾ

೦ ೦ ೦

ಸ್ತ್ರೀಯು ಪುರೋಪಮಾಗಿಯೂ ಸುಖ
ಮಗಿಯೂ ಬಾಳಿಬೇಕಾದಲ್ಲಿ ಮನೆಯಲ್ಲಿ
ಸಮಸ್ಯೆಯಂಬ ಬಂಡೆಕಿ. ಸುಖಶಾಂತಿಯಾದ
ಸೆಂಗಸು ಸುಸಂಸ್ಕಾರವಿರುವ ಮನೆ
ಯಲ್ಲಾ ತಂದಿರಿಯು ಸ್ತ್ರೀಯಾಗಿರುವಳು.

೦ ೦ ೦

ನಿಗೆ ತಿಳವಳಿಕೆಯಿನ್ನು ಕೊಟ್ಟ ಪರ
ಮಾತ್ಮನಿಗೆ ಆ ತಿಳವಳಿಕೆಯ ಶಕ್ತಿಯನ್ನೇ
ಕೊಂಡಾ. ಶಿಸ್ತಿಲ ಧ್ಯಾನವೇ ಪರಮಾತ್ಮ
ಪ್ರಾಪ್ತಿಯನ್ನಿಸಿ, ಒಡಂಬರಕ್ಕಾಗಿ ತಪಿಯಾ
ಡಿರುವುದಾಗಿ ಸುಳ್ಳು ಭಾಷೆ ಬಾಯಿಯಿಲ್ಲ
ಶಕ್ತಿ ತರಗಲೆಯೇ ಹೊರತು ಎಂಗಳೇ
ಸ್ಪಾರವು ಅವನಿಗೆ ಪ್ರಿಯವು.

೦ ೦ ೦

ಜೀವನಯಾತ್ರೆಯ ಪಥಾಯಾತ್ರೆ ನಾಲಿ
ಗೆಯ ನೆಲೆಯಿಲ್ಲಿ ಕೂಡಾಗಲೇ ಗೊರ್ಕಾಗು
ವಯಾಗಿ ಪಿತಾಂಬರನ್ನು ನಿಮಗಳೇ
ಲೊಕಕ್ಕೆಸ್ಪಿಕರಾಗಿರುವ ಪರಮಾತ್ಮನ ಸ
ಸಾಕ್ಷಿಯೂ ಸೊತ್ತಾಗುತ್ತವೆ

ತಗದೂರಿನಲ್ಲಿ ದೇಶಭಕ್ತರ ದಿನಾಚರಣೆ.

